**ಕರ್ನಾಟಕ ಸರ್ಕಾರ**

ಸಂ. ಕೌಉಜೀಇ 41 ಉಜೀಸೇ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, 3ನೇ ಮಹಡಿ,
ಬೆಂಗಳೂರು, ದಿನಾಂಕ:14.11.2019

**ಅಧಿಸೂಚನೆ**

ಕರ್ನಾಟಕ ಬೀದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ) ನಿಯಮಗಳು, 2016ರ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 13ನೇ ಮೇ, 2016 ರ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆ ಭಾಗ–IVಎ, ಸಂಖ್ಯೆ 739 ರ ಅಧಿಸೂಚನೆ ಸಂಖ್ಯೆ: ಯುಡಿಡಿ 81 ಎಂಎಲ್‌ಆರ್ 2014 ರಲ್ಲಿ ಪ್ರಕಟಿಸಲಾಗಿರುವುದರಿಂದ;

ಸದರಿ ರಾಜ್ಯಪತ್ರವನ್ನು 13.05.2016ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿರುವುದರಿಂದ.

ಈ ಬಗ್ಗೆ ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ.

ಆದ್ದರಿಂದ, ಈಗ ಬೀದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ) ಅಧಿನಿಯಮ, 2014 (ಕೇಂದ್ರ ಅಧಿನಿಯಮ 2014 ರ 7) ರ 36ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

**ಅಧ್ಯಾಯ–I**

1. **ಶೀರ್ಷಿಕೆ ಮತ್ತು ಪ್ರಾರಂಭ.**–(1) ಈ ನಿಯಮಗಳನ್ನು **ಕರ್ನಾಟಕ ಬೀದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ) ನಿಯಮಗಳು, 2019** ಎಂದು ಕರೆಯತಕ್ಕದ್ದು.

(2) ಇವು, ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.**– ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಅಧಿನಿಯಮ"** ಎಂದರೆ, ಬೀದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ) ಅಧಿನಿಯಮ, 2014 (ಕೇಂದ್ರ ಅಧಿನಿಯಮದ ಸಂಖ್ಯೆ: 2014 ರ 7);

(ಬಿ) **"ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ"** ಎಂದರೆ, ಆಯುಕ್ತರು ಅಥವಾ ಪೌರಾಯುಕ್ತರು ಅಥವಾ ಮುಖ್ಯಾಧಿಕಾರಿಗಳು ಅಥವಾ ಸಂದರ್ಭಾನುಸಾರ, ನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಯೋಜನಾ ಪ್ರಾಧಿಕಾರ ಅಥವಾ ದಂಡು ಪ್ರದೇಶ ಮಂಡಳಿಯ ಆಡಳಿತದ ಪ್ರಭಾರ ಹೊಂದಿರುವ ಅಧಿಕಾರಿ;

(ಸಿ) **"ನಮೂನೆ"** ಎಂದರೆ, ಈ ನಿಯಮಗಳಿಗೆ ಅನುಬಂಧಿಸಿದ ನಮೂನೆ;

(ಡಿ) **"ಸರ್ಕಾರ"** ಎಂದರೆ, ಕರ್ನಾಟಕ ಸರ್ಕಾರ;

(ಇ) **"ಸಾರ್ವಜನಿಕ ಉದ್ದೇಶ"** ಎಂಬ ಪದವು ಈ ಅಧಿನಿಯಮದ ಸಂದರ್ಭದಲ್ಲಿ, ಈ ಮುಂದಿನವುಗಳನ್ನು ಒಳಗೊಂಡಿರುತ್ತದೆ–

(i) ರಸ್ತೆಗಳು, ಬೀದಿಗಳು, ಪಥಗಳ ಅಗಲೀಕರಣ ಮಾಡುವುದು;

(ii) ರಸ್ತೆಗಳು, ಬೀದಿಗಳು, ಪಥಗಳ ಸಾಲು ಜೋಡಣೆಯನ್ನು ಬದಲಾಯಿಸುವುದು;

(iii) ಕ್ಲೋವರ್ ಲೀವ್ಸ್ ಮತ್ತು ಸ್ಲಿಪ್ ಡೌನ್‌ರೋಡ್‌ಗಳ ಸಹಿತ ಅಥವಾ ರಹಿತ ಮೇಲು ಸೇತುವೆಗಳನ್ನು ನಿರ್ಮಿಸುವುದು.

(iv) ಕೆಳ ಸೇತುವೆಗಳನ್ನು ನಿರ್ಮಿಸುವುದು;

(v) ಯಾವ ಸಾರ್ವಜನಿಕ ಯೋಜನೆಗಳಿಗಾಗಿ ಭೂಮಿಯನ್ನು ಮೀಸಲಿಡಲಾಗಿದೆಯೋ ಅಥವಾ ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಆ ಉದ್ದೇಶಕ್ಕಾಗಿ ಭೂಮಿಯನ್ನು ಅಭಿವೃದ್ಧಿಪಡಿಸುವುದು;

(vi) ನಗರ ಯೋಜನಾ ಸ್ಕೀಮ್‌ಗಳನ್ನು ಅನುಷ್ಠಾನಗೊಳಿಸುವುದು;

(vii) ನೀರು, ಮಳೆ ನೀರು ಅಥವಾ ಕೊಳಚೆ ನೀರಿನ ಕಾಲುವೆಗಳನ್ನು ನಿರ್ಮಿಸುವುದು;

(viii) ನೀರು ಸರಬರಾಜಿಗಾಗಿ ಮಧ್ಯಂತರ ಪಂಪಿಂಗ್ ಕೇಂದ್ರಗಳನ್ನು ನಿರ್ಮಿಸುವುದು;

(ix) ಸಾರ್ವಜನಿಕ ಸೌಕರ್ಯಗಳು;

(x) ತ್ವರಿತ ಬಸ್ ಸಾರಿಗೆ ವ್ಯವಸ್ಥೆ (ಬಿಆರ್‌ಟಿಎಸ್), ಮೆಟ್ರೊ, ಮುಂತಾದ ಸಾರ್ವಜನಿಕ ಸಾರಿಗೆಗೆ ಸಂಬಂಧಿಸಿದ ಯಾವುದೇ ಯೋಜನೆ;

(xi) ಆರ್ಥಿಕವಾಗಿ ದುರ್ಬಲವಾಗಿರುವ ವರ್ಗದವರಿಗೆ (ಇಡಬ್ಲ್ಯೂಎಸ್) ಮನೆಗಳನ್ನು ನಿರ್ಮಿಸುವುದು;

(xii) ಉದ್ಯಾನವನ, ತೋಟಗಳು ಮತ್ತು ಮನರಂಜನೆಯ ಪ್ರದೇಶಗಳನ್ನು ಸೃಜಿಸುವುದು;

(xiii) ಆ ಪ್ರದೇಶದಲ್ಲಿ ಯಾವುದೇ ಜೀವ ಪರಿಸರ ವ್ಯವಸ್ಥೆಯ ಸಂಪನ್ಮೂಲ ಸಂರಕ್ಷಣೆ; ಮತ್ತು

(xiv) ಸ್ಥಳೀಯ ಪ್ರಾಧಿಕಾರವು ಕೈಗೊಂಡ, ಸಮುದಾಯವೇ ಬಹುತೇಕ ಫಲಾನುಭವಿಯಾಗುವ ಯಾವುದೇ ಇತರೆ ಅಭಿವೃದ್ಧಿ ಕಾಮಗಾರಿ.

(ಎಫ್) **"ಪ್ರಕರಣ"** ಎಂದರೆ, ಅಧಿನಿಯಮದ ಪ್ರಕರಣ;

(ಜಿ) **"ಅನುಸೂಚಿ"** ಎಂದರೆ, ಈ ನಿಯಮಗಳಿಗೆ ಅನುಬಂಧಿಸಿದ ಅನುಸೂಚಿ;

(2) ಈ ಅಧಿನಿಯಮದಲ್ಲಿ ಪರಿಭಾಷಿಸಲಾದ ಮತ್ತು ನಿಯಮಗಳಲ್ಲಿ ಬಳಸಲಾದ ಪದಗಳು ಮತ್ತು ಪದಾವಳಿಗಳು, ಅಧಿನಿಯಮದಲ್ಲಿ ಅವುಗಳಿಗೆ ಕೊಟ್ಟಿರುವ ಆಯಾ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ–II

### ಪಟ್ಟಣ ಮಾರಾಟ ಸಮಿತಿ

3. **ಪಟ್ಟಣ ಮಾರಾಟ ಸಮಿತಿ ರಚನೆ.–** (1) ರಾಜ್ಯ ಸರ್ಕಾರವು, ಪ್ರತಿಯೊಂದು ಸ್ಥಳೀಯ ಪ್ರಾಧಿಕಾರಕ್ಕೆ ಪಟ್ಟಣ ಮಾರಾಟ ಸಮಿತಿಯನ್ನು ಈ ಮುಂದಿನಂತೆ ರಚಿಸತಕ್ಕದ್ದು, ಎಂದರೆ:–

**ಎ.** ಮೂರು ಲಕ್ಷಗಳಿಗಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಮಹಾನಗರ ಪಾಲಿಕೆಗಳಲ್ಲಿ ವಲಯವಾರು ಅಥವಾ ಅದರ ಭಾಗದಲ್ಲಿ ಈ ಕೆಳಕಂಡವರನ್ನು ಒಳಗೊಂಡಂತೆ ಪಟ್ಟಣ ಮಾರಾಟ ಸಮಿತಿಯನ್ನು ರಚಿಸತಕ್ಕದ್ದು, ಎಂದರೆ:–

(ಎ) ಸರ್ಕಾರಿ ಸದಸ್ಯರು,–

(i) ಆಯುಕ್ತರಿಂದ ನಾಮ ನಿರ್ದೇಶಿಸಲಾದ ನಗರ ಪಾಲಿಕೆಯ ಜಂಟಿ ಆಯುಕ್ತರು ಅಥವಾ ಉಪ ಆಯುಕ್ತರು ಪಟ್ಟಣ ಮಾರಾಟ ಸಮಿತಿ ಅಧ್ಯಕ್ಷರಾಗಿರತಕ್ಕದ್ದು;

(ii) ಆಯುಕ್ತರಿಂದ ನಾಮನಿರ್ದೇಶಿಸಲಾದ ಸ್ಥಳೀಯ ಪ್ರಾಧಿಕಾರದ ವೈದ್ಯಾಧಿಕಾರಿ ಅಥವಾ ಸಾರ್ವಜನಿಕ ಆರೋಗ್ಯ ಕ್ರಮಗಳ ನಿರ್ವಹಣೆಯ ಪ್ರಭಾರ ಹೊಂದಿರುವ ಯಾರೇ ಅಧಿಕಾರಿ;

(iii) ಆಯುಕ್ತರಿಂದ ನಾಮನಿರ್ದೇಶಿಸಲಾದ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಒಬ್ಬ ಕಾರ್ಯನಿರ್ವಾಹಕ ಅಭಿಯಂತರರು ಅಥವಾ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು;

(iv) ಆಯುಕ್ತರಿಂದ ನಾಮನಿರ್ದೇಶಿಸಲಾದ ನಗರ ಸ್ಥಳೀಯ ಸಂಸ್ಥೆಯ ಒಬ್ಬ ಪರಿಸರ ಅಭಿಯಂತರರು;

(v) ಸಂದರ್ಭಾನುಸಾರ, ಪೊಲೀಸ್ ಅಧೀಕ್ಷಕರಿಂದ ಅಥವಾ ಪೊಲೀಸ್ ಆಯುಕ್ತರಿಂದ ನಾಮನಿರ್ದೇಶಿಸಲಾದ ಉಪ–ಪೊಲೀಸ್ ಅಧೀಕ್ಷಕರು(ಡಿವೈಎಸ್‌ಪಿ) ಅಥವಾ ಉಪ–ಪೊಲೀಸ್ ಆಯುಕ್ತರು;

(vi) ಆಯುಕ್ತರು, ಉದ್ಯಮಶೀಲತೆ ಮತ್ತು ಜೀವನೋಪಾಯ ಇವರಿಂದ ನಾಮನಿರ್ದೇಶಿಸಲಾದ, ದೀನದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಅಥವಾ ತತ್ಸಮಾನ ಯೋಜನೆಯ ಒಬ್ಬ ಯೋಜನಾಧಿಕಾರಿ;

(vii) ನಗರದಲ್ಲಿನ ಒಬ್ಬ ಲೀಡ್ ಬ್ಯಾಂಕ್ ಮ್ಯಾನೇಜರ್; ಮತ್ತು

(viii) ಜಿಲ್ಲೆಯ ಜಿಲ್ಲಾಧಿಕಾರಿಯಿಂದ ನಾಮನಿರ್ದೇಶಿಸಲಾದ ಆ ಪ್ರದೇಶದ ಉಪ–ತಹಶೀಲ್ದಾರ್ ಅಥವಾ ಕಂದಾಯ ನಿರೀಕ್ಷಕ;

(ಬಿ) ಸರ್ಕಾರೇತರ ಸದಸ್ಯರು,–

(i) ಬೀದಿ ವ್ಯಾಪಾರದಲ್ಲಿ ತೊಡಗಿರುವ ಬೀದಿ ವ್ಯಾಪಾರಿಗಳ ಹತ್ತು ಜನ ಪ್ರತಿನಿಧಿಗಳು (ಇವರಲ್ಲಿ ಮೂರನೇ ಒಂದರಷ್ಟು ಮಹಿಳಾ ವ್ಯಾಪಾರಿಗಳಿರತಕ್ಕದ್ದು, ಜೊತೆಗೆ, ಇವರಲ್ಲಿ ಪರಿಶಿಷ್ಟ ಜಾತಿಯ, ಪರಿಶಿಷ್ಟ ಪಂಗಡದ,ಇತರ ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಹಾಗೂ ವಿಕಲಚೇತನರ ಕನಿಷ್ಠ ಒಬ್ಬ ಪ್ರತಿನಿಧಿ ಇರತಕ್ಕದ್ದು);

(ii) ಪ್ರದೇಶ ಮಟ್ಟದ ಒಕ್ಕೂಟ (ಎಎಲ್‌ಎಫ್)/ ನಗರ ಮಟ್ಟದ ಒಕ್ಕೂಟ (ಸಿಎಲ್‌ಎಫ್) ಒಬ್ಬ ಪ್ರತಿನಿಧಿ;

(iii) ವ್ಯಾಪಾರಿಗಳ ಸಂಘದ ಒಬ್ಬ ಪ್ರತಿನಿಧಿ;

(iv) ಮಾರುಕಟ್ಟೆ ಸಂಘದ ಒಬ್ಬ ಪ್ರತಿನಿಧಿ;

(v) ಸ್ಥಳೀಯ ಸರ್ಕಾರೇತರ ಸಂಸ್ಥೆಯ ಒಬ್ಬ ಸದಸ್ಯ;

(vi) ಮಾನ್ಯತೆ ಪಡೆದ ರಾಷ್ಟ್ರೀಯ ಕಾರ್ಮಿಕ ಸಂಘದ ಅಧ್ಯಕ್ಷ ಅಥವಾ ಕಾರ್ಯದರ್ಶಿ ಅಥವಾ ಪದಾಧಿಕಾರಿ;

(vii) ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದಒಬ್ಬ ಪ್ರತಿನಿಧಿ; ಮತ್ತು

(viii) ಪ್ರತಿ ಐದು ವರ್ಷಗಳಿಗೆ ಅಥವಾ ಪದಾವಧಿ ಮುಗಿಯುವವರೆಗೆ–ಈ ಎರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಲಾಟರಿ ಎತ್ತುವ ಮೂಲಕ ನಾಮನಿರ್ದೇಶಿಸಲಾದ ಒಬ್ಬ ನಗರ ಪಾಲಿಕೆ ಸದಸ್ಯ;

ಬಿ. ನಗರ ಸಭೆ (ಸಿಎಂಸಿ)ಯ ಸಂದರ್ಭದಲ್ಲಿ, ಸಮಿತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ,–

(ಎ) ಸರ್ಕಾರಿ ಸದಸ್ಯರು,–

(i) ಪೌರಾಯುಕ್ತರು ಪಟ್ಟಣ ಮಾರಾಟ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು;

(ii) ಸ್ಥಳೀಯ ಪ್ರಾಧಿಕಾರದ ಒಬ್ಬ ವೈದ್ಯಾಧಿಕಾರಿ ಅಥವಾ ಸಾರ್ವಜನಿಕ ಆರೋಗ್ಯ ಕ್ರಮಗಳ ನಿರ್ವಹಣೆಯ ಪ್ರಭಾರ ಹೊಂದಿರುವ ಯಾರೇ ಅಧಿಕಾರಿ;

(iii) ಒಬ್ಬ ಉಪ–ಪೊಲೀಸ್ ಅಧೀಕ್ಷಕರು (ಸಂಚಾರ);

(iv) ನಗರ ಸ್ಥಳೀಯ ಸಂಸ್ಥೆಯ ಒಬ್ಬ ಕಾರ್ಯನಿರ್ವಾಹಕ ಅಭಿಯಂತರರು ಅಥವಾ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು;

(v) ದೀನದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಅಥವಾ ತತ್ಸಮಾನ ಯೋಜನೆಯ ಒಬ್ಬ ಯೋಜನಾಧಿಕಾರಿಯು, ಸದಸ್ಯ–ಕಾರ್ಯದರ್ಶಿಯಾಗಿರತಕ್ಕದ್ದು;

(vi) ಜಿಲ್ಲೆಯ ಒಬ್ಬ ಲೀಡ್ ಬ್ಯಾಂಕ್ ವ್ಯವಸ್ಥಾಪಕ;

(vii) ನಗರ ಸ್ಥಳೀಯ ಸಂಸ್ಥೆಯ ಒಬ್ಬ ಪರಿಸರ ಅಭಿಯಂತರರು; ಮತ್ತು

(viii) ಆ ಪ್ರದೇಶ ವ್ಯಾಪ್ತಿಯ ಜಿಲ್ಲಾಧಿಕಾರಿಗಳಿಂದ ನೇಮಿಸಲ್ಪಡುವ ಒಬ್ಬ ಉಪ–ತಹಸೀಲ್ದಾರ್ ಅಥವಾ ಕಂದಾಯ ನಿರೀಕ್ಷಕ;

(ಬಿ) ಸರ್ಕಾರೇತರ ಸದಸ್ಯರು:–

(i) ಬೀದಿ ವ್ಯಾಪಾರಗಳಲ್ಲಿ ತೊಡಗಿರುವ ಹತ್ತು ಜನ ಪ್ರತಿನಿಧಿಗಳು (ಇವರಲ್ಲಿ ಮೂರನೇ ಒಂದರಷ್ಟು ಮಹಿಳಾ ವ್ಯಾಪಾರಿಗಳಿರತಕ್ಕದ್ದು, ಜೊತೆಗೆ, ಇವರಲ್ಲಿ ಪರಿಶಿಷ್ಟ ಜಾತಿಯ, ಪರಿಶಿಷ್ಟ ಪಂಗಡದ,ಇತರ ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಹಾಗೂ ವಿಕಲಚೇತನರ ಕನಿಷ್ಠ ಒಬ್ಬ ಪ್ರತಿನಿಧಿ ಇರತಕ್ಕದ್ದು);

(ii) ವ್ಯಾಪಾರಿಗಳ ಸಂಘದ ಅಧ್ಯಕ್ಷ ಅಥವಾ ಕಾರ್ಯದರ್ಶಿ ಪ್ರತಿನಿಧಿ;

(iii) ಮಾರುಕಟ್ಟೆ ಸಂಘದ ಅಧ್ಯಕ್ಷ ಅಥವಾ ಕಾರ್ಯದರ್ಶಿ ಪ್ರತಿನಿಧಿ;

(iv) ಪ್ರದೇಶ ಮಟ್ಟದ ಒಕ್ಕೂಟ ಅಧ್ಯಕ್ಷ ಅಥವಾ ಕಾರ್ಯದರ್ಶಿ ಪ್ರತಿನಿಧಿ;

(v) ಮಾನ್ಯತೆ ಪಡೆದ ರಾಷ್ಟ್ರೀಯ ಕಾರ್ಮಿಕ ಸಂಘದ ಅಧ್ಯಕ್ಷ ಅಥವಾ ಕಾರ್ಯದರ್ಶಿ ಅಥವಾ ಪದಾಧಿಕಾರಿ;

(vi) ಸ್ಥಳೀಯ ಸರ್ಕಾರೇತರ ಸಂಸ್ಥೆಯ ಒಬ್ಬ ಸದಸ್ಯ;

(vii) ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಒಬ್ಬ ಪ್ರತಿನಿಧಿ; ಮತ್ತು

(viii) ಪ್ರತಿ ಐದು ವರ್ಷಗಳಿಗೆ ಅಥವಾ ಪದಾವಧಿ ಮುಗಿಯುವವರೆಗೆ– ಈ ಎರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಲಾಟರಿ ಎತ್ತುವ ಮೂಲಕ ನಾಮನಿರ್ದೇಶಿಸಲಾದ ನಗರ ಸ್ಥಳೀಯ ಸಂಸ್ಥೆಯ ಪರಿಷತ್ತಿನ ಒಬ್ಬ ಸದಸ್ಯ;

ಸಿ. ಪುರಸಭೆ(ಟಿ.ಎಂ.ಸಿ)ಯ ಸಂದರ್ಭದಲ್ಲಿ, ಪಟ್ಟಣ ಮಾರಾಟ ಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಸರ್ಕಾರಿ ಸದಸ್ಯರು,–

(i) ಮುಖ್ಯಾಧಿಕಾರಿಯು ಪಟ್ಟಣ ಮಾರಾಟ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು;

(ii) ಪೊಲೀಸ್ ಅಧೀಕ್ಷಕರಿಂದ ನಾಮನಿರ್ದೇಶಿಸಲಾದ ಆ ಪ್ರದೇಶದ ಅಧಿಕಾರ ವ್ಯಾಪ್ತಿಯುಳ್ಳ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್;

(iii) ಸ್ಥಳೀಯ ಪ್ರಾಧಿಕಾರದ ಸಂಬಂಧಪಟ್ಟ ಒಬ್ಬ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಅಥವಾ ಕಿರಿಯ ಅಭಿಯಂತರರು;

(iv) ದೀನ್ ದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಅಥವಾ ತತ್ಸಮಾನವಾದ ಯೋಜನೆಯ ಒಬ್ಬ ಯೋಜನಾ ಅಧಿಕಾರಿಯು, ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

(v) ಆ ಲೀಡ್ ಬ್ಯಾಂಕಿನ ಒಬ್ಬ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಅಥವಾ ಆತನ ಪ್ರತಿನಿಧಿ;

(vi) ನಗರ ಸ್ಥಳೀಯ ಸಂಸ್ಥೆಯ ಒಬ್ಬ ಪರಿಸರ ಅಭಿಯಂತರರು; ಮತ್ತು

(vii) ಕ್ಷೇತ್ರ ವ್ಯಾಪ್ತಿಯನ್ನುಳ್ಳ ಒಬ್ಬ ಕಂದಾಯ ನಿರೀಕ್ಷಕ.

(ಬಿ) ಸರ್ಕಾರೇತರ ಸದಸ್ಯರು:–

(i) ಬೀದಿ ವ್ಯಾಪಾರದಲ್ಲಿ ತೊಡಗಿರುವ ಹತ್ತುಜನ ಪ್ರತಿನಿಧಿಗಳು (ಇವರಲ್ಲಿ ಮೂರನೇ ಒಂದರಷ್ಟು ಮಹಿಳಾ ವ್ಯಾಪಾರಿಗಳೇ ಇರತಕ್ಕದ್ದು, ಜೊತೆಗೆ, ಇವರಲ್ಲಿ ಪರಿಶಿಷ್ಟ ಜಾತಿಯ, ಪರಿಶಿಷ್ಟ ಪಂಗಡದ, ಇತರ ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಹಾಗೂ ವಿಕಲಚೇತನರ ಕನಿಷ್ಠ ಒಬ್ಬ ಪ್ರತಿನಿಧಿ ಇರತಕ್ಕದ್ದು);

(ii) ಮಾರುಕಟ್ಟೆ ಸಂಘದ ಒಬ್ಬ ಸದಸ್ಯ;

(iii) ವ್ಯಾಪಾರಿಗಳ ಸಂಘದ ಒಬ್ಬ ಸದಸ್ಯ;

(iv) ಸರ್ಕಾರೇತರ ಸಂಸ್ಥೆಯ ಒಬ್ಬ ಸದಸ್ಯ;

(v) ಪ್ರದೇಶ ಮಟ್ಟದ ಒಕ್ಕೂಟದ ಅಧ್ಯಕ್ಷ ಅಥವಾ ಕಾರ್ಯದರ್ಶಿ;

(vi) ಮಾನ್ಯತೆ ಪಡೆದ ರಾಷ್ಟ್ರೀಯ ಕಾರ್ಮಿಕ ಸಂಘದ ಅಧ್ಯಕ್ಷ ಅಥವಾ ಕಾರ್ಯದರ್ಶಿ ಅಥವಾ ಪದಾಧಿಕಾರಿ;

(vii) ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಒಬ್ಬ ಪ್ರತಿನಿಧಿ; ಮತ್ತು

(viii) ಪ್ರತಿ ಐದು ವರ್ಷಗಳಿಗೆ ಅಥವಾ ಪದಾವಧಿ ಮುಗಿಯುವವರೆಗೆ– ಈ ಎರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಲಾಟರಿ ಎತ್ತುವ ಮೂಲಕ ನಾಮನಿರ್ದೇಶಿಸಲಾದ ನಗರ ಸ್ಥಳೀಯ ಸಂಸ್ಥೆಯ ಪರಿಷತ್ತಿನ ಒಬ್ಬ ಸದಸ್ಯ;

**ಡಿ.** ಪಟ್ಟಣ ಪಂಚಾಯತಿ (ಟಿಪಿ)ಯ ಸಂದರ್ಭದಲ್ಲಿ, ಸಮಿತಿಯು, ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ :–

(ಎ) ಸರ್ಕಾರಿ ಸದಸ್ಯರು,–

(i) ಮುಖ್ಯಾಧಿಕಾರಿಯವರು ಪಟ್ಟಣ ಮಾರಾಟ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು;

(ii) ಪೊಲೀಸ್ ಅಧೀಕ್ಷಕರಿಂದ ನಾಮನಿರ್ದೇಶಿಸಲಾದ ಪ್ರದೇಶದ ಅಧಿಕಾರ ವ್ಯಾಪ್ತಿಯುಳ್ಳ ಒಬ್ಬ ಪೊಲೀಸ್ ಸಬ್–ಇನ್ಸ್‌ಪೆಕ್ಟರ್;

(iii) ಮುಖ್ಯಾಧಿಕಾರಿಯಿಂದ ನಾಮನಿರ್ದೇಶಿಸಲಾದ ಸ್ಥಳೀಯ ಪ್ರಾಧಿಕಾರದ ಸಂಬಂಧಪಟ್ಟ ಒಬ್ಬ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಅಥವಾ ಕಿರಿಯ ಅಭಿಯಂತರರು;

(iv) ದೀನ್‌ದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಅಥವಾ ತತ್ಸಮಾನ ಯೋಜನೆಯ ಒಬ್ಬ ಯೋಜನಾ ಅಧಿಕಾರಿಯು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

(v) ಲೀಡ್ ಬ್ಯಾಂಕ್ ವ್ಯವಸ್ಥಾಪಕನ ಒಬ್ಬ ಪ್ರತಿನಿಧಿ;

(vi) ಮುಖ್ಯಾಧಿಕಾರಿಯಿಂದ ನಾಮನಿರ್ದೇಶಿತನಾದ ಒಬ್ಬ ಆರೋಗ್ಯ ನಿರೀಕ್ಷಕ ಅಥವಾ ನೈರ್ಮಲ್ಯ ನಿರೀಕ್ಷಕ;

(ಬಿ) ಸರ್ಕಾರೇತರ ಸದಸ್ಯರು:–

(i) ಬೀದಿ ವ್ಯಾಪಾರಗಳಲ್ಲಿ ತೊಡಗಿರುವ ಹತ್ತು ಜನ ಪ್ರತಿನಿಧಿಗಳು (ಇವರಲ್ಲಿ ಮೂರನೇ ಒಂದರಷ್ಟು ಮಹಿಳಾ ವ್ಯಾಪಾರಿಗಳೇ ಇರತಕ್ಕದ್ದು, ಜೊತೆಗೆ ಇವರಲ್ಲಿ ಪರಿಶಿಷ್ಟ ಜಾತಿಯ, ಪರಿಶಿಷ್ಟ ಪಂಗಡದ,ಇತರ ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಹಾಗೂ ವಿಕಲಚೇತನರ ಕನಿಷ್ಠ ಒಬ್ಬ ಪ್ರತಿನಿಧಿ ಇರತಕ್ಕದ್ದು);

(ii) ಮಾರುಕಟ್ಟೆ ಸಂಘದ ಒಬ್ಬ ಸದಸ್ಯ;

(iii) ವ್ಯಾಪಾರಿಗಳ ಸಂಘದ ಒಬ್ಬ ಸದಸ್ಯ;

(iv) ಸರ್ಕಾರೇತರ ಸಂಸ್ಥೆಯ ಒಬ್ಬ ಸದಸ್ಯ;

(v) ನಗರ ಮಟ್ಟದ ಒಕ್ಕೂಟದ ಅಧ್ಯಕ್ಷ ಅಥವಾ ಕಾರ್ಯದರ್ಶಿ;

(vi) ಮಾನ್ಯತೆ ಪಡೆದ ರಾಷ್ಟ್ರೀಯ ಕಾರ್ಮಿಕ ಸಂಘದ ಅಧ್ಯಕ್ಷ ಅಥವಾ ಕಾರ್ಯದರ್ಶಿ ಅಥವಾ ಪದಾಧಿಕಾರಿ;

(vii) ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಒಬ್ಬ ಪ್ರತಿನಿಧಿ; ಮತ್ತು

(viii) ಪ್ರತಿ ಐದು ವರ್ಷಗಳಿಗೆ ಅಥವಾ ಪದಾವಧಿ ಮುಗಿಯುವವರೆಗೆ – ಈ ಎರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಲಾಟರಿ ಮೂಲಕ ನಾಮನಿರ್ದೇಶಿಸಲಾದ ನಗರ ಸ್ಥಳೀಯ ಸಂಸ್ಥೆಯ ಪರಿಷತ್ತಿನ ಒಬ್ಬ ಸದಸ್ಯ;

4. **ತಾತ್ಕಾಲಿಕ ಪಟ್ಟಣ ಮಾರಾಟ ಸಮಿತಿ.–**(1) 3ನೇ ನಿಯಮದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ಬೀದಿ ವ್ಯಾಪಾರಿಗಳ ಸಮೀಕ್ಷೆ ಪೂರ್ಣಗೊಳಿಸಿ, ಅಂತಹ ಸಮೀಕ್ಷೆಯ ಆಧಾರದ ಮೇಲೆ ಬೀದಿ ವ್ಯಾಪಾರಿಗಳ ಪ್ರತಿನಿಧಿಗಳ ಚುನಾವಣೆಯನ್ನು ನಡೆಸುವ ಸಮಯದವರೆಗೆ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರಕ್ಕೆ ತಾತ್ಕಾಲಿಕ ಪಟ್ಟಣ ಮಾರಾಟ ಸಮಿತಿಯನ್ನು ರಚಿಸತಕ್ಕದ್ದು. ಸರ್ಕಾರವು, ಒಂದು ಲಿಖಿತ ಆದೇಶದ ಮೂಲಕ ಈ ಉದ್ದೇಶಕ್ಕಾಗಿ ಅಧಿನಿಯಮದಲ್ಲಿ ನಮೂದಿಸಲಾದ ವಿವಿಧ ಪ್ರವರ್ಗಗಳ ಪಟ್ಟಣ ಮಾರಾಟ ಸಮಿತಿಯ ಎಲ್ಲ ಸದಸ್ಯರುಗಳನ್ನು ನಾಮನಿರ್ದೇಶನ ಮಾಡುವ ತನ್ನ ಅಧಿಕಾರವನ್ನು ಪ್ರತ್ಯಾಯೋಜಿಸಬಹುದು.

(2) ಉಪ–ನಿಯಮ (1)ರ ಮೇರೆಗೆ, ತಾತ್ಕಾಲಿಕ ಪಟ್ಟಣ ಮಾರಾಟ ಸಮಿತಿಗೆ ಬೀದಿ ವ್ಯಾಪಾರಿಗಳ ನಾಮನಿರ್ದೇಶನವು ಯಾವ ನಗರ ಅಥವಾ ಪಟ್ಟಣಕ್ಕಾಗಿ ಬೀದಿ ವ್ಯಾಪಾರಿಗಳ ಸಮಿತಿಯನ್ನು ರಚಿಸಬೇಕಾಗಿದೆಯೋ ಆ ನಗರದ ಅಥವಾ ಪಟ್ಟಣದ ಬೀದಿ ವ್ಯಾಪಾರಿಯ ಆಧಾರ್ ಕಾರ್ಡ್ ಮತ್ತು ಆ ನಗರ ಅಥವಾ ಪಟ್ಟಣದಲ್ಲಿ ಆ ವ್ಯಕ್ತಿಯು ಬೀದಿ ಬದಿ ವ್ಯಾಪಾರಿಯಾಗಿರುವನೆಂಬುದನ್ನು ರುಜುವಾತುಪಡಿಸುವಂತಹ ಆರು ತಿಂಗಳಿಗಿಂತಲೂ ಹಳೆಯದಾದ ದಾಖಲೆಯು ಆಧಾರವಾಗಿರತಕ್ಕದ್ದು.

(3) (1)ನೇ ಉಪ–ನಿಯಮದ ಮೇರೆಗೆ ರಚಿಸಲಾದ ತಾತ್ಕಾಲಿಕ ಪಟ್ಟಣ ಮಾರಾಟ ಸಮಿತಿಯ ಅವಧಿಯು ಒಂದು ವರ್ಷದವರೆಗೆ ಅಥವಾ ಕೈಗೊಂಡ ಸಮೀಕ್ಷೆಯ ಆಧಾರದ ಮೇಲೆ ಪಟ್ಟಣ ಮಾರಾಟ ಸಮಿತಿಗೆ ಬೀದಿ ವ್ಯಾಪಾರಿಗಳ ಚುನಾವಣೆಯನ್ನು ನಡೆಸಬಹುದಾದ ಕಾಲದವರೆಗೆ ಇದರಲ್ಲಿ ಯಾವುದೂ ಮೊದಲೋ ಅಲ್ಲಿಯವರೆಗೆ ಇರತಕ್ಕದ್ದು.

**5. ಸರ್ಕಾರೇತರ ಸದಸ್ಯರನ್ನು ಆಯ್ಕೆ ಅಥವಾ ಚುನಾವಣೆ ಮೂಲಕ ಆಯ್ಕೆ ಮಾಡುವ ವಿಧಾನ.–**

(1) ನಗರಪಾಲಿಕೆ ಅಥವಾ ಸ್ಥಳೀಯ ಪ್ರಾಧಿಕಾರದ ಪರಿಷತ್ತು, ಪಟ್ಟಣ ಮಾರಾಟ ಸಮಿತಿಗೆ ನಾಮನಿರ್ದೇಶನ ಮಾಡಬೇಕಾದ ತನ್ನ ಸದಸ್ಯರಲ್ಲಿ ಒಬ್ಬ ಸದಸ್ಯನನ್ನು ಲಾಟರಿ ಎತ್ತುವ ಮೂಲಕ ತೀರ್ಮಾನಿಸತಕ್ಕದ್ದು.

(2) ಬೀದಿ ವ್ಯಾಪಾರಿಗಳಿಂದ, ಪಟ್ಟಣ ಮಾರಾಟ ಸಮಿತಿ ಸದಸ್ಯರುಗಳ ಆಯ್ಕೆಗಾಗಿ ಚುನಾವಣೆಯನ್ನು ಈ ನಿಯಮಗಳಿಗೆ ಅನುಬಂಧಿಸಿದ ಅನುಸೂಚಿಯಲ್ಲಿ ಹೇಳಿರುವ ರೀತಿಯಲ್ಲಿ ನಡೆಸತಕ್ಕದ್ದು.

**6. ಮತದಾರರ ಪಟ್ಟಿ.–** (1)ಸ್ಥಳೀಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಚುನಾವಣೆಯು ನಿಗದಿಯಾಗಿರುವ ದಿನಾಂಕಕ್ಕಿಂತ ಮೂರು ತಿಂಗಳಿಗಿಂತ ಮುಂಚೆ ನೋಂದಾಯಿತ ಬೀದಿ ವ್ಯಾಪಾರಿಗಳ ಮತದಾರರ ಪಟ್ಟಿಯನ್ನು ಪ್ರಕಟಿಸತಕ್ಕದ್ದು. ಹದಿನೈದು ದಿನಗಳೊಳಗೆ ಸಲಹೆಗಳು ಅಥವಾ ಆಕ್ಷೇಪಣೆಗಳನ್ನು ಆಹ್ವಾನಿಸಿ, ಚುನಾವಣೆಗೆ ನಿಗದಿಪಡಿಸಿದ ದಿನಾಂಕಕ್ಕಿಂತ ಒಂದು ತಿಂಗಳ ಮುಂಚೆ ಸಂದರ್ಭಾನುಸಾರ, ಪೌರಾಯುಕ್ತರು ಅಥವಾ ಮುಖ್ಯಾಧಿಕಾರಿಯು ಆ ಬಗ್ಗೆ ತಿರ್ಮಾನಿಸತಕ್ಕದ್ದು. ಪಟ್ಟಣ ಮಾರಾಟ ಸಮಿತಿಗೆ ಬೀದಿ ವ್ಯಾಪಾರಿಗಳ ಚುನಾವಣೆಯ ಉದ್ದೇಶಕ್ಕಾಗಿ ಅಂತಿಮಗೊಳಿಸಿದ ನೋಂದಾಯಿತ ಬೀದಿ ವ್ಯಾಪಾರಿಗಳ ಅಂತಿಮ ಪಟ್ಟಿಯೇ ಮತದಾರರ ಪಟ್ಟಿಯಾಗಿರತಕ್ಕದ್ದು.

(2) ನೋಂದಾಯಿತ ಬೀದಿ ವ್ಯಾಪಾರಿಗಳ ಪ್ರತಿನಿಧಿಗಳನ್ನು ಚುನಾಯಿಸುವ ಉದ್ದೇಶಕ್ಕಾಗಿ ಸಂದರ್ಭಾನುಸಾರ, ಸ್ಥಳೀಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ನೋಂದಾಯಿತ ವ್ಯಾಪಾರಿಗಳ ಅಂತಿಮ ಮತದಾರರ ಪಟ್ಟಿಯನ್ನು ಕರ್ನಾಟಕದ ಸಹಕಾರ ಸಂಘಗಳ ಚುನಾವಣಾ ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು.

**7. ಪಟ್ಟಣ ಮಾರಾಟ ಸಮಿತಿ ಕಾಲಾವಧಿ.–** (1) ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಪಟ್ಟಣ ಮಾರಾಟ ಸಮಿತಿಯ ಸದಸ್ಯರುಗಳ ಪದಾವಧಿಯು, ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದಂತೆ ನಡೆಸಲಾದ ಚುನಾವಣೆಗಳ ತರುವಾಯ ನಡೆದ ಪಟ್ಟಣ ಮಾರಾಟ ಸಮಿತಿಯ ಮೊದಲ ಸಭೆಯ ದಿನಾಂಕದಿಂದ ಐದು ವರ್ಷಗಳವರೆಗೆ ಅಥವಾ ಅವರು ಈಗಾಗಲೇ ಪದವನ್ನು ಹೊಂದಿದ್ದರೆ, ಆ ಪದಾವಧಿಯವರೆಗೆ ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯಾಗಿರತಕ್ಕದ್ದು.

(2) ಸಮಿತಿಯ ಸದಸ್ಯರನ್ನು ಸಂದರ್ಭಾನುಸಾರ, ಚುನಾಯಿಸುವ ಅಥವಾ ನಾಮನಿರ್ದೇಶಿಸುವ ಪ್ರಕ್ರಿಯೆಯನ್ನು ಅವರ ಪದಾವಧಿಯ ಮುಕ್ತಾಯಕ್ಕೆ ಮುಂಚೆಯೇ ಪೂರ್ಣಗೊಳಿಸತಕ್ಕದ್ದು.

**8. ಪಟ್ಟಣ ಮಾರಾಟ ಸಮಿತಿಯ ಸರ್ಕಾರೇತರ ಸದಸ್ಯನನ್ನು ವಜಾಗೊಳಿಸುವುದು.–** ಪಟ್ಟಣ ಮಾರಾಟ ಸಮಿತಿಯ ಯಾರೇ ಸರ್ಕಾರೇತರ ಸದಸ್ಯನು ಅಧಿನಿಯಮದ ಅಥವಾ ನಿಯಮಗಳ ಮೂಲಕ ಅಥವಾ ಅವುಗಳ

ಅಡಿಯಲ್ಲಿ ಆತನಿಗೆ ವಹಿಸಲಾದ ಕರ್ತವ್ಯಗಳನ್ನು ನಿರ್ವಹಿಸಲು ಪದೇ ಪದೇ ತಪ್ಪಿದ್ದಾನೆಂದು ಅಥವಾ ಆ ಅಧಿಕಾರಗಳನ್ನು ಮೀರಿದ್ದಾನೆಂದು ಅಥವಾ ದುರುಪಯೋಗ ಪಡಿಸಿಕೊಂಡಿದ್ದಾನೆಂದು, ನಿರಂತರವಾಗಿ ಎರಡಕ್ಕಿಂತ ಹೆಚ್ಚಿನ ಸಭೆಗಳಿಗೆ ಗೈರು ಹಾಜರಾಗಿದ್ದಾನೆಂದು ಅಥವಾ ಸಭೆಯಲ್ಲಿ ದುರ್ನಡತೆಯಿಂದ ವರ್ತಿಸಿದ್ದಾನೆಂದು ದಾಖಲು ಮಾಡಿದ ಆರೋಪಿಯಾಗಿದ್ದಾನೆಂದು ಅಥವಾ ಯಾವುದೇ ಕ್ರಿಮಿನಲ್ ಆರೋಪಿಯಾಗಿದ್ದಾನೆಂದು ರಾಜ್ಯ ಸರ್ಕಾರ ಅಭಿಪ್ರಾಯಪಟ್ಟಲ್ಲಿ, ಆ ಜಿಲ್ಲೆಯ ಜಿಲ್ಲಾಧಿಕಾರಿಯು, ಪಟ್ಟಣ ಮಾರಾಟ ಸಮಿತಿಯಿಂದ ಅಂತಹ ಸದಸ್ಯನನ್ನು ವಜಾಗೊಳಿಸಿ ಆದೇಶಿಸಬಹುದು.

ಜಿಲ್ಲಾಧಿಕಾರಿಯವರ ಆದೇಶದ ವಿರುದ್ಧವಾಗಿ ಆಯುಕ್ತರು, ಉದ್ಯಮಶೀಲತೆ ಮತ್ತು ಜೀವನೋಪಾಯ ಇವರು ಮೇಲ್ಮನವಿ ಪ್ರಾಧಿಕಾರವಾಗಿರತಕ್ಕದ್ದು. ಆಯುಕ್ತರು, ಉದ್ಯಮಶೀಲತೆ ಮತ್ತು ಜೀವನೋಪಾಯ ಇವರ ಆದೇಶಕ್ಕೆ ವಿರುದ್ಧವಾಗಿ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇವರು ಮೇಲ್ಮನವಿ ಪ್ರಾಧಿಕಾರವಾಗಿರತಕ್ಕದ್ದು:

ಪರಂತು, ಅಂತಹ ಸದಸ್ಯನನ್ನು ವಜಾಗೊಳಿಸಿ ಆದೇಶವನ್ನು ಹೊರಡಿಸುವುದಕ್ಕೆ ಮುಂಚೆ ಆತನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶವನ್ನು ನೀಡತಕ್ಕದ್ದು. ಸದರಿ ಆದೇಶವನ್ನು ಹೊರಡಿಸಿದ 30 ದಿನಗಳ ತರುವಾಯ ಯಾವುದೇ ವಜಾ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸುವಂತಿಲ್ಲ.

**9. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ವಿಧಾನ.–** ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಯಾರೇ ಸದಸ್ಯನ ರಾಜೀನಾಮೆ, ಮರಣ, ವಜಾಗೊಳಿಸುವಿಕೆಯ ಕಾರಣದಿಂದ ಅಥವಾ ಯಾವುದೇ ಇತರೆ ಕಾರಣಗಳಿಂದಾಗಿ, ಅಸ್ತಿತ್ವದಲ್ಲಿರುವ ಪಟ್ಟಣ ಮಾರಾಟ ಸಮಿತಿಯಲ್ಲಿ ಯಾವುದೇ ಖಾಲಿ ಹುದ್ದೆಗಳು ಸಂಭವಿಸಿದ್ದಲ್ಲಿ, ಅಂತಹ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ನಿಯಮ 5 ರಲ್ಲಿ ನಿರೂಪಿಸಲಾದಂಥ ನಿಯಮಗಳನ್ನು ಅನುಸರಿಸತಕ್ಕದ್ದು.

**10. ಪಟ್ಟಣ ಮಾರಾಟ ಸಮಿತಿಯ ಸಭೆಗಳು.–** (1) ಪಟ್ಟಣ ಮಾರಾಟ ಸಮಿತಿಯು, ಸಾಮಾನ್ಯವಾಗಿ ಮೂರು ತಿಂಗಳ ಅವಧಿಯೊಳಗೆ ಕನಿಷ್ಠ ಪಕ್ಷ ಒಂದು ಬಾರಿ ಸಭೆ ಸೇರತಕ್ಕದ್ದು ಅಥವಾ ಪಟ್ಟಣ ಮಾರಾಟ ಸಮಿತಿಯ ಕಾರ್ಯಕಲಾಪಗಳ ನಿರ್ವಹಣೆಗಾಗಿ ಸಮಿತಿಯ ಅಧ್ಯಕ್ಷರು ನಿರ್ಧರಿಸಬಹುದಾದಂಥ ಯಾವುದೇ ಮಧ್ಯಂತರ ಅವಧಿಗಳಲ್ಲಿಯೂ ಸಭೆ ಸೇರತಕ್ಕದ್ದು:

ಪರಂತು, ಪಟ್ಟಣ ಮಾರಾಟ ಸಮಿತಿಯು ರಚನೆಯಾದ ನಲ್ವತ್ತೈದು ದಿನಗಳೊಳಗೆ ಅಧ್ಯಕ್ಷರು ಸಮಿತಿಯ ಮೊದಲ ಸಭೆಯನ್ನು ಕರೆಯತಕ್ಕದ್ದು:

ಮತ್ತು ಪರಂತು, ಅಧ್ಯಕ್ಷರು ಸ್ವತಃ ತಾವಾಗಿಯೇ ಅಥವಾ ಒಂದು ನಿರ್ದಿಷ್ಟ ವಿಷಯದ ಬಗ್ಗೆ ಕನಿಷ್ಠ ಪಕ್ಷ ಹತ್ತು ಜನ ಸಮಿತಿಯ ಸದಸ್ಯರುಗಳ ಕೋರಿಕೆಯ ಮೇಲೆ ವಿಶೇಷ ಸಭೆಯನ್ನು ಕರೆಯಬಹುದು; ಮತ್ತು ಹಾಗೆ ಕೋರಿಕೆಯನ್ನು ಸ್ವೀಕರಿಸಿದ ಎಪ್ಪತ್ತೆರಡು ಗಂಟೆಯೊಳಗಾಗಿ ಸಭೆ ಕರೆಯತಕ್ಕದ್ದು.

(2) ಪಟ್ಟಣ ಮಾರಾಟ ಸಮಿತಿಯ ಸಭೆಗಳನ್ನು ಸ್ಥಳೀಯ ಪ್ರಾಧಿಕಾರದ ಕೇಂದ್ರ ಕಾರ್ಯಸ್ಥಾನದಲ್ಲಿ ಅಥವಾ ಅಧ್ಯಕ್ಷರು ನಿರ್ಧರಿಸಬಹುದಾದಂತೆ ಅಂತಹ ಸ್ಥಳಗಳಲ್ಲಿ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ನಡೆಸತಕ್ಕದ್ದು.

(3) ಪಟ್ಟಣ ಮಾರಾಟ ಸಮಿತಿಯ ಎಲ್ಲ ಸದಸ್ಯರುಗಳಿಗೆ ನಿಗದಿಯಾದ ಸಭೆಯನ್ನು ಏಳು ದಿನಗಳ ಮುಂಚಿತವಾಗಿ ಸಭೆಯ ಕಾರ್ಯ ಸೂಚಿ ಸಹಿತ ನೋಟೀಸನ್ನು ನೀಡತಕ್ಕದ್ದು.

(4) ಪಟ್ಟಣ ಮಾರಾಟ ಸಮಿತಿಯ ಒಟ್ಟು ಸಂಖ್ಯಾ ಬಲದ ಅರ್ಧದಷ್ಟು ಸದಸ್ಯರು ಸಭೆಯ ಕೋರಂ ಆಗಿರತಕ್ಕದ್ದು.

(5) ಕೋರಂ ಇಲ್ಲದಿದ್ದರೆ ಯಾವುದೇ ಸಭೆಯನ್ನು ನಡೆಸತಕ್ಕದ್ದಲ್ಲ ಮತ್ತು ಕೋರಂ ಇಲ್ಲದಿದ್ದರೆ ಸಭೆಯನ್ನು ಮುಂದೂಡತಕ್ಕದ್ದು.

(6) ಸಭೆಯ ಕಾರ್ಯ ಸೂಚಿಯನ್ನು ಪಟ್ಟಣ ಮಾರಾಟ ಸಮಿತಿಯ ಅಧ್ಯಕ್ಷರು ನಿರ್ಧರಿಸತಕ್ಕದ್ದು.

**11. ಪಟ್ಟಣ ಮಾರಾಟ ಸಮಿತಿಯ ಕಾರ್ಯಕಲಾಪಗಳ ನಿರ್ವಹಣಾ ಪ್ರಕ್ರಿಯೆ.–**(1) ಪಟ್ಟಣ ಮಾರಾಟ ಸಮಿತಿಯು, ಸಮಿತಿಯ ಕಾರ್ಯಕಲಾಪಗಳ ನಿರ್ವಹಣೆಗಾಗಿ ಅಧ್ಯಕ್ಷರು ಸದಸ್ಯರೊಂದಿಗೆ ಸಮಾಲೋಚಿಸಿ ನಿರ್ಧರಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸಬಹುದು.

(2) ಅಧಿನಿಯಮ ಮತ್ತು ಈ ನಿಯಮಗಳ ಉಪಬಂಧಗಳಿಗೊಳಪಟ್ಟು ಮತ್ತು ಉಪ–ವಿಧಿಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಪಟ್ಟಣ ಮಾರಾಟ ಸಮಿತಿಯ ಸಭೆಯಲ್ಲಿ ಉಪಸ್ಥಿತರಿರುವ ಸದಸ್ಯರ ಬಹುಮತದ ಮೂಲಕ ನಿರ್ಣಯವನ್ನು ಅಂಗೀಕರಿಸತಕ್ಕದ್ದು.

(3) ಅಧ್ಯಕ್ಷರು ಪ್ರತಿಯೊಂದು ಸಭೆಯ ನಡಾವಳಿಗಳನ್ನು ದಾಖಲಿಸಿ, ಅದಕ್ಕೆ ತನ್ನ ಸಹಿ ಮಾಡಲಾಗಿದೆ ಮತ್ತು ಅದನ್ನು ಎಲ್ಲಾ ಸದಸ್ಯರುಗಳಿಗೆ ಪರಿಚಲಿಸಲಾಗಿದೆ ಮತ್ತು ಸಮಿತಿಯ ಜಾಲತಾಣವೇನಾದರೂ ಇದ್ದರೆ, ಸಭೆ ನಡೆದ ಒಂದು ತಿಂಗಳೊಳಗಾಗಿ ಅದನ್ನು ಆ ಜಾಲತಾಣದಲ್ಲಿ ಪ್ರಕಟಿಸಲಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.

(4) ಪಟ್ಟಣ ಮಾರಾಟ ಸಮಿತಿಯ ಸದಸ್ಯರು ಇಡೀ ಸಭೆಯ ಅವಧಿಯಲ್ಲಿ ಶಿಸ್ತು ಮತ್ತು ಸಭ್ಯತೆಯನ್ನು ಪಾಲಿಸತಕ್ಕದ್ದು.

(5) ಸದಸ್ಯರು ಅಧ್ಯಕ್ಷರ ಪೂರ್ವಾನುಮತಿಯೊಂದಿಗೆ ಯಾವುದೇ ಪ್ರಶ್ನೆಯನ್ನು ಎತ್ತಬಹುದು.

(6) ಸದಸ್ಯರು, ಸಂದರ್ಭಾನುಸಾರ, ನಗರಪಾಲಿಕೆಯ ಅಥವಾ ನಗರಸಭೆಯ ಅಥವಾ ಪುರಸಭೆಯ ಅಥವಾ ಪಟ್ಟಣ ಪಂಚಾಯತಿಯ ಯಾರೇ ನೌಕರನ ಮೇಲೆ ಯಾವುದೇ ಅಕ್ರಮದ ಆಪಾದನೆಯನ್ನು ಅಥವಾ ಆರೋಪವನ್ನು ಹೊರಿಸಲಾಗುತ್ತಿರುವ ಸಂದರ್ಭದಲ್ಲಿ ಸಂಬಂಧಿಸಿದ ಎಲ್ಲ ಅಗತ್ಯ ದಾಖಲೆಗಳನ್ನು ಸಲ್ಲಿಸತಕ್ಕದ್ದು.

(7) ಸದಸ್ಯರು, ಅಂಥ ಸಭೆಯ ದಿನಾಂಕಕ್ಕೆ ಕನಿಷ್ಠ ಏಳು ದಿನಗಳ ಮುಂಚಿತವಾಗಿ ಅಧ್ಯಕ್ಷರಿಗೆ ಲಿಖಿತದಲ್ಲಿ ಪ್ರಸ್ತಾವನೆ, ಸಲಹೆ, ಸೂಚನೆಗಳನ್ನು ಸಲ್ಲಿಸತಕ್ಕದ್ದು.

(8) ಯಾವುದೇ ಚರ್ಚಾ ವಿಷಯದ ಬಗ್ಗೆ ಮಾತನಾಡಲು ಇಚ್ಛಿಸುವ ಸದಸ್ಯರಿಗೆ ಅಧ್ಯಕ್ಷರು ನಿರ್ದಿಷ್ಟ ಕಾಲಾವಧಿಯನ್ನು ನೀಡಬಹುದು:

ಪರಂತು, ಈಗಾಗಲೇ ಚರ್ಚೆಯಾಗಿರುವ ವಿಷಯದ ಮೇಲೆ ಮಾತನಾಡಲು ಸದಸ್ಯನು ಹಕ್ಕುಳ್ಳವನಾಗಿರತಕ್ಕದ್ದಲ್ಲ. ಆ ಬಗ್ಗೆ ಅಧ್ಯಕ್ಷರ ತೀರ್ಮಾನವೇ ಅಂತಿಮವಾಗಿದ್ದು, ಅದಕ್ಕೆ ಎಲ್ಲಾ ಸದಸ್ಯರು ಬದ್ಧರಾಗಿರತಕ್ಕದ್ದು.

(9) ಯಾವುದೇ ವಿಷಯ ಅಥವಾ ವಿವಾದಾಂಶದ ಮೇಲಿನ ತೀರ್ಮಾನವನ್ನು ಮತದ ವಿಭಜನೆಯ ಮೂಲಕ ಅಥವಾ ಧ್ವನಿಮತದ ಮೂಲಕ ತೀರ್ಮಾನಿಸಬಹುದು. ಮತಗಳು ಸಮನಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷರು ತಮ್ಮ ನಿರ್ಣಾಯಕ ಮತವನ್ನು ಚಲಾಯಿಸಬಹುದು.

(10) ಪಟ್ಟಣ ಮಾರಾಟ ಸಮಿತಿಯ ಅಧ್ಯಕ್ಷರು, ಯಾರೇ ಸದಸ್ಯರು ಸಭೆಯನ್ನು ನಡೆಸುವುದಕ್ಕಾಗಿ ಮಾಡಿದ ನಿಯಮಗಳನ್ನು ಉಲ್ಲಂಘಿಸಿದಂಥ ಸಂದರ್ಭದಲ್ಲಿ, ಅಂಥ ಸದಸ್ಯನನ್ನು ಅಥವಾ ಸದಸ್ಯರನ್ನು ತಾತ್ಕಾಲಿಕವಾಗಿ ಸಭೆಯ ಉಳಿದ ಅವಧಿಗೆ ಅಮಾನತು ಮಾಡಬಹುದು.

(11) ಅಧ್ಯಕ್ಷರು, ಸಂದರ್ಭಾನುಸಾರ ಹಾಗೆ ಅಮಾನತ್ತುಗೊಂಡ ಸದಸ್ಯನನ್ನು ಅಥವಾ ಸದಸ್ಯರನ್ನು ಸಭೆಯಿಂದ ಹೊರಗೆ ಕಳುಹಿಸುವಂತೆ ಭದ್ರತಾ ಸಿಬ್ಬಂದಿಗೆ ಆದೇಶಿಸಬಹುದು.

(12) ಅಂತಹ ಸಭೆಯ ನಡವಳಿಗಳನ್ನು ದಾಖಲಿಸಿ, ಅದನ್ನು ಪ್ರತಿಯೊಬ್ಬ ಸದಸ್ಯರಿಗೂ ಪರಿಚಲಿಸತಕ್ಕದ್ದು.

(13) ಸಭೆಯ ಕಾರ್ಯಕಲಾಪಗಳಿಗೆ ಅನುಸಾರವಾಗಿಲ್ಲದ ಕರಪತ್ರಗಳು, ಬ್ಯಾನರ್‌ಗಳಂಥ, ಯಾವುದೇ ಲಿಖಿತ ಸಾಮಗ್ರಿಯನ್ನು ಅಥವಾ ಅಂತಹ ವಸ್ತುಗಳನ್ನು ಸಭಾಂಗಣಕ್ಕೆ ತರಲು ಸದಸ್ಯನಿಗೆ ಅವಕಾಶ ನೀಡತಕ್ಕದ್ದಲ್ಲ.

(14) ಸದಸ್ಯನು, ಯಾವುದೇ ಆಯುಧಗಳನ್ನು, ಮದ್ದುಗುಂಡುಗಳನ್ನು ಅಥವಾ ಅಂತಹ ಯಾವುದೇ ಸಲಕರಣೆಗಳು ಅಥವಾ ಸಾಧನಗಳನ್ನು ಸಹ ಸಭೆಯ ಸಭಾಂಗಣದೊಳಗೆ ತರತಕ್ಕದ್ದಲ್ಲ.

**12. ಸದಸ್ಯರ ಗೈರುಹಾಜರಿಯ ಅನುಮತಿ ಮತ್ತು ಅನರ್ಹತೆ.–** ಪಟ್ಟಣ ಮಾರಾಟ ಸಮಿತಿಯ ಸದಸ್ಯರ ಗೈರುಹಾಜರಿಯ ಅನುಮತಿ ಮತ್ತು ಅನರ್ಹತೆಯನ್ನು ಈ ಮುಂದಿನ ರೀತಿಯಲ್ಲಿ ನಿರ್ಧರಿಸತಕ್ಕದ್ದು, ಎಂದರೆ:–

(ಎ) ತುರ್ತು ಸಂದರ್ಭದಲ್ಲಿ, ಸದಸ್ಯನು ಸಮಿತಿಯ ಅಧ್ಯಕ್ಷರಿಂದ ಲಿಖಿತ ಪೂರ್ವಾನುಮತಿ ಪಡೆದು ಸಭೆಗೆ ಗೈರು ಹಾಜರಾಗಬಹುದು.

(ಬಿ)(i) ಸದಸ್ಯನು ಲಿಖಿತ ಪೂರ್ವಾನುಮತಿ ಪಡೆಯದೇ ನಿರಂತರವಾಗಿ ಎರಡು ಸಭೆಗಳಿಗೆ ಗೈರು ಹಾಜರಾದಾಗ, ಅಧ್ಯಕ್ಷರು ಆತ ಅಥವಾ ಆಕೆಯು ಸಭೆಗೆ ಗೈರು ಹಾಜರಾಗಿರುವುದಕ್ಕೆ ಎರಡು ವಾರದೊಳಗೆ ವಿವರಣೆ ನೀಡುವಂತೆ ತಿಳಿಸಿ, ಆತನಿಗೆ ಅಥವಾ ಆಕೆಗೆ ಕಾರಣಕೇಳಿ ನೋಟೀಸನ್ನು ನೀಡತಕ್ಕದ್ದು. ಅಂತಹ ಸದಸ್ಯನು, ತನ್ನ ಗೈರು ಹಾಜರಿಗಾಗಿ ತೃಪ್ತಿಕರವಾದ ವಿವರಣೆ ಅಥವಾ ಕಾರಣಗಳನ್ನು ನೀಡಿದ್ದಲ್ಲಿ ಆತನಿಗೆ ಅಥವಾ ಆಕೆಗೆ ಎಚ್ಚರಿಕೆ ನೀಡಿ ಸದಸ್ಯರಾಗಿ ಮುಂದುವರೆಸಬಹುದು. ಅಂತಹ ಸನ್ನಿವೇಶ ಎರಡನೇ ಬಾರಿಗೆ ಪುನರಾವರ್ತನೆಯಾದಲ್ಲಿ, ಆ ಸದಸ್ಯನನ್ನು ಅಧ್ಯಕ್ಷರ ಲಿಖಿತ ಆದೇಶದ ಮೂಲಕ ಸಮಿತಿಯಿಂದ ಅಮಾನತ್ತುಗೊಳಿಸತಕ್ಕದ್ದು ಮತ್ತು ಆ ಸದಸ್ಯನನ್ನು ವಜಾಗೊಳಿಸಲು ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಅಧಿಕಾರ ಪ್ರತ್ಯಾಯೋಜಿಸತಕ್ಕದ್ದು.

(ii) ಅಂತಹ ಸದಸ್ಯನು ಸಭೆಗಳಿಗೆ ತಾನು ಗೈರು ಹಾಜರಾದುದ್ದಕ್ಕೆ ಯಾವುದೇ ತೃಪ್ತಿಕರವಾದ ಕಾರಣ ನೀಡಲು ವಿಫಲನಾದಲ್ಲಿ ಅಥವಾ ಸಕಾಲದಲ್ಲಿ ಕಾರಣ ಕೇಳುವ ನೋಟಿಸ್‌ಗೆ ಉತ್ತರಿಸದಿದ್ದಲ್ಲಿ, ಆತನ/ಆಕೆಯ ಸಮಿತಿಯ ಸದಸ್ಯತ್ವವನ್ನು ಅಮಾನತ್ತುಗೊಳಿಸತಕ್ಕದ್ದು ಮತ್ತು ಅಂತಹ ಅಮಾನತ್ತು ಆದೇಶವನ್ನು ಪಟ್ಟಣ ಮಾರಾಟ ಸಮಿತಿಯು ಆ ಸದಸ್ಯರಿಗೆ ಮತ್ತು ವಜಾ ಆದೇಶವನ್ನು ಹೊರಡಿಸುವ ಸಲುವಾಗಿ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕಳುಹಿಸತಕ್ಕದ್ದು.

(ಸಿ) ಯಾವುದೇ ಕ್ರಿಮಿನಲ್ ಮೊಕದ್ದಮೆಯಲ್ಲಿ ಅಪರಾಧಿಯೆಂದು ನಿರ್ಣೀತನಾಗಿರುವ ಯಾರೇ ಸದಸ್ಯನು, ಆ ಕೂಡಲೇ ಸಮಿತಿಯ ತನ್ನ ಸದಸ್ಯತ್ವವನ್ನು ಕಳೆದುಕೊಳ್ಳತಕ್ಕದ್ದು. ಯಾವುದೇ ಕ್ರಿಮಿನಲ್ ಮೊಕದ್ದಮೆಯಲ್ಲಿ ಆರೋಪಿಯಾಗಿರುವ ಯಾರೇ ಸದಸ್ಯನನ್ನು ನ್ಯಾಯಾಲಯದಿಂದ ಆರೋಪಗಳು ನಿರ್ಣಯವಾಗುವರೆಗೂ ಸಮಿತಿಯಿಂದ ಅಮಾನತುಗೊಳಿಸತಕ್ಕದ್ದು.

(ಡಿ) ಸಮಿತಿಯ ತನ್ನ ಸದಸ್ಯತ್ವವನ್ನು ಕಳೆದುಕೊಂಡಿರುವ ಯಾರೇ ಸದಸ್ಯನು ವಜಾ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಆಯುಕ್ತರು, ಉದ್ಯಮಶೀಲತೆ ಮತ್ತು ಜೀವನೋಪಾಯ ಇವರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು. ಆಯುಕ್ತರು, ಉದ್ಯಮಶೀಲತೆ ಮತ್ತು ಜೀವನೋಪಾಯ– ಇವರು

ಉಭಯ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳುವ ಯುಕ್ತ ಅವಕಾಶವನ್ನು ನೀಡಿದ ತರುವಾಯ, 30 ದಿನಗಳೊಳಗಾಗಿ ಮೇಲ್ಮನವಿಯನ್ನು ತೀರ್ಮಾನಿಸತಕ್ಕದ್ದು ಮತ್ತು ಅದರಿಂದ ಬಾಧಿತನಾದ ಪಕ್ಷಕಾರನು, ಸದರಿ ಆದೇಶದ 60 ದಿನಗಳೊಳಗೆ ಎರಡನೇ ಮೇಲ್ಮನವಿಯನ್ನು ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಜೀವನೋಪಾಯ ಇವರಿಗೆ ಸಲ್ಲಿಸಬಹುದು. ಅವರು ಅಹವಾಲನ್ನು ಹೇಳಿಕೊಳ್ಳುವ ಯುಕ್ತ ಅವಕಾಶವನ್ನು ನೀಡಿದ ನಂತರ 60 ದಿನಗಳೊಳಗೆ ಮೇಲ್ಮನವಿಯನ್ನು ತೀರ್ಮಾನಿಸತಕ್ಕದ್ದು. ಆ ಕುರಿತಾದ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(ಇ) ಯಾರೇ ಸದಸ್ಯನು ದುರ್ವರ್ತನೆ ತೋರಿದರೆ ಅಥವಾ ಕೆಟ್ಟ ಭಾಷೆಯನ್ನು ಬಳಸಿದರೆ ಅಥವಾ ಹಿಂಸಾತ್ಮಕ ವರ್ತನೆಯಲ್ಲಿ ತೊಡಗಿದರೆ ಅಥವಾ ಕಾರ್ಯಕಲಾಪಗಳಿಗೆ ಅಡ್ಡಿಪಡಿಸಿದರೆ ಆ ಘಟನೆಯನ್ನು ನಡವಳಿಗಳಲ್ಲಿ ದಾಖಲಿಸಿದ ತರುವಾಯ ಆತನನ್ನು ಸಮಿತಿಯಿಂದ ಹೊರ ಹಾಕತಕ್ಕದ್ದು ಮತ್ತು ವಜಾಗೊಳಿಸುವಿಕೆ ಆದೇಶಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಅದನ್ನು ತಿಳಿಸತಕ್ಕದ್ದು.

(ಎಫ್) ಯಾರೇ ವ್ಯಕ್ತಿಯು, ಈ ನಿಯಮಗಳ ಪ್ರಾರಂಭದ ತರುವಾಯ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಆರು ತಿಂಗಳಿಗಿಂತ ಹೆಚ್ಚಿನ ಅವಧಿಗೆ ಕಾರಾವಾಸ ಶಿಕ್ಷೆಗೆ ಗುರಿಯಾಗಿದ್ದಲ್ಲಿ, ಅವನನ್ನು ಅಪರಾಧಿಯೆಂದು ನಿರ್ಣಯಿಸಿದ ದಿನಾಂಕದಿಂದ ಅಥವಾ ಆದೇಶ ಜಾರಿಗೆ ಬಂದ ದಿನಾಂಕದಿಂದ ಆರು ವರ್ಷಗಳ ಅವಧಿಗೆ ಆತನು ಚುನಾವಣೆಗಳಿಗೆ ಸ್ಪರ್ಧಿಸಲು ಅನರ್ಹನಾಗತಕ್ಕದ್ದು.

(ಜಿ) ಯಾರೇ ಸದಸ್ಯನು ತನ್ನ ರಾಜೀನಾಮೆಯನ್ನು ಪಟ್ಟಣ ಮಾರಾಟ ಸಮಿತಿಯ ಅಧ್ಯಕ್ಷರಿಗೆ ಖುದ್ದಾಗಿ ನೀಡಬಹುದು ಮತ್ತು ಅಧ್ಯಕ್ಷನು ಅದನ್ನು ಸ್ವೀಕರಿಸಿದ ಕೂಡಲೇ ರಾಜೀನಾಮೆಯು ತಕ್ಷಣದಿಂದಲೇ ಜಾರಿಗೆ ಬರತಕ್ಕದ್ದು.

**13. ಸ್ಥಳೀಯ ಪ್ರಾಧಿಕಾರವು ಬೀದಿ ವ್ಯಾಪಾರದ ಬಗೆಗಿನ ಚಿತ್ರಣದ ಸ್ಥಿತಿಗತಿ ಪತ್ರವನ್ನು ಮಂಡಿಸತಕ್ಕದ್ದು.–** ಪಟ್ಟಣ ಮಾರಾಟ ಸಮಿತಿಯು ಪ್ರಕ್ರಿಯೆ ವಿವರಗಳನ್ನು ಅಂತಿಮಗೊಳಿಸಿದ ತರುವಾಯ ಮತ್ತು ಅದು ನಿಯತ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಮುಂಚೆ ಸಮಿತಿಯು ಈ ಕೆಳಕಂಡ ವಿವರಗಳನ್ನು ಒಳಗೊಂಡ ನಗರ ಅಥವಾ ಪಟ್ಟಣದ ಬೀದಿ ವ್ಯಾಪಾರದ ಕುರಿತಾದ ಚಿತ್ರಣದ ಸ್ಥಿತಿಗತಿ ಪತ್ರವನ್ನು ಸಿದ್ಧಪಡಿಸಿ, ಅದನ್ನು ಸಮಿತಿಯ ಸದಸ್ಯರುಗಳಿಗೆ ಪರಿಚಲಿಸತಕ್ಕದ್ದು. ಎಂದರೆ:–

(i) ಜಿಯೋ–ಟ್ಯಾಗಿಂಗ್ ಮತ್ತು ಟೋಟಲ್ ಸ್ಟೇಷನ್ ಸರ್ವೆ ಬಳಸಿ ಯುಕ್ತವಾಗಿ ಸಿದ್ಧಪಡಿಸಿದ ನಕ್ಷೆಯಲ್ಲಿ ತೋರಿಸಿರುವ ನಗರ ಅಥವಾ ಪಟ್ಟಣದಲ್ಲಿನ ಬೀದಿ ವ್ಯಾಪಾರ ಪ್ರದೇಶಗಳು.

(ii) ಈಗಾಗಲೇ ಸಮೀಕ್ಷೆಯನ್ನು ನಡೆಸಲಾಗಿದ್ದಲ್ಲಿ, ನಗರ ಅಥವಾ ಪಟ್ಟಣದಲ್ಲಿ ಬೀದಿ ವ್ಯಾಪಾರಿಗಳ ಸಂಖ್ಯೆ, ಸಮೀಕ್ಷೆ ನಡೆಸದೇ ಇದ್ದಲ್ಲಿ ಬೀದಿ ವ್ಯಾಪಾರಿಗಳ ಅಂದಾಜು ಸಂಖ್ಯೆ ತೋರಿಸಬೇಕು.

(iii) ಬೀದಿ ವ್ಯಾಪಾರದ ದೃಷ್ಟಿಯಿಂದ ಜನರು ಹೆಚ್ಚಾಗಿ ಬಂದು ಹೋಗುವ ಪ್ರದೇಶಗಳು, ಕಡಿಮೆ ಜನರು ಬಂದು ಹೋಗುವ ಪ್ರದೇಶಗಳು ಹಾಗೂ ಮಧ್ಯದ ಪ್ರದೇಶಗಳ ಬಗ್ಗೆ ಮಾಹಿತಿ.

(iv) ಋತುಮಾನ ಸಂಬಂಧಿ ಬೀದಿ ವ್ಯಾಪಾರದ ಪ್ರದೇಶಗಳು, ನಿರ್ದಿಷ್ಟ ವಸ್ತುಗಳ ಮಾರುಕಟ್ಟೆ ಪ್ರದೇಶಗಳು, ರಾತ್ರಿ ವೇಳೆ ವ್ಯಾಪಾರ ನಡೆಸುವ ಪ್ರದೇಶಗಳು, ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳಲ್ಲಿ ಜನರು ಹೆಚ್ಚಾಗಿ ಬಂದು ಹೋಗುವ ಸ್ಥಳಗಳ ವಿವರ.

(v) ಸಮೀಕ್ಷೆ ಮಾಡಲಾದ ಎಲ್ಲಾ ಬೀದಿ ವ್ಯಾಪಾರಿಗಳು ಮಾರಾಟ ಮಾಡುವ ವಸ್ತುಗಳ ಬಗೆಗಳು, ಹೂಡಿದ ಮೊತ್ತ, ಪ್ರತಿದಿನದ, ಪ್ರತಿ ತಿಂಗಳ ಮಾರಾಟಗಳು.

(vi) ಸಂಚಾರದ ದೃಷ್ಟಿಯಿಂದ ಸಮಸ್ಯಾತ್ಮಕ ಪ್ರದೇಶಗಳು,

(vii) ಆಹಾರ ಕಲಬೆರಕೆ ಪ್ರತಿಬಂಧಕ ಅಧಿನಿಯಮ, 1954ರ ಸುಸಂಗತ ಉಪಬಂಧಗಳ ವಿವರಗಳ ನಮೂದನೆ, ಮತ್ತು

(viii) ಬೀದಿ ವ್ಯಾಪಾರಿಗಳು ಅಗತ್ಯ ಎಚ್ಚರಿಕೆ ವಹಿಸಬೇಕಾದ ಆರೋಗ್ಯ ಮತ್ತು ನೈರ್ಮಲ್ಯ (hygiene) ಸಂಬಂಧಿತ ಅಂಶಗಳ ನಮೂದನೆ.

**ವಿವರಣೆ:–** ಸಲ್ಲಿಸಲಾದ ದತ್ತಾಂಶವು, ಸಾಧ್ಯವಾದಷ್ಟು ಮಟ್ಟಿಗೆ ವಿಶ್ವಾಸಾರ್ಹವಾಗಿದೆ ಮತ್ತು ಈವರೆಗೂ ಅಪ್–ಡೇಟ್ ಆಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಎಚ್ಚರಿಕೆ ವಹಿಸತಕ್ಕದ್ದು, ಈ ದತ್ತಾಂಶ ಮೂಲಗಳನ್ನು ಸಲ್ಲಿಸುವಂತೆ ಸಮಿತಿಯು ಇಚ್ಛಿಸಿದಲ್ಲಿ ಅದನ್ನು ಡಿಜಿಟಲ್ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

**14. ಪಟ್ಟಣ ಮಾರಾಟ ಸಮಿತಿಯ ಪ್ರಕಾರ್ಯಗಳು.–** ಈ ಅಧಿನಿಯಮದ ಇತರ ಯಾವುವೇ ಉಪಬಂಧಗಳಿಗೆ ಬಾಧಕವಾಗದಂತೆ, ಪಟ್ಟಣ ಮಾರಾಟ ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನೇರವೇರಿಸತಕ್ಕದ್ದು, ಎಂದರೆ:–

(1) ಆ ಪ್ರದೇಶದಲ್ಲಿರುವ ಬೀದಿ ವ್ಯಾಪಾರಿಗಳನ್ನು ಗುರುತಿಸಲು ಅದರ ಅಧಿಕಾರ ವ್ಯಾಪ್ತಿಯ ಪ್ರದೇಶದೊಳಗೆ ಸಮೀಕ್ಷೆಗಳನ್ನು ನಡೆಸುವುದು ಮತ್ತು ಅದರ ಅಧಿಕಾರ ವ್ಯಾಪ್ತಿಯ ಪ್ರದೇಶದೊಳಗೆ ನಿಬಂಧನೆಗಳು, ಯೋಜನೆ ಮತ್ತು ಅಲ್ಲಿನ ಧಾರಣಾ ಸಾಮರ್ಥ್ಯಕ್ಕೆ ಅನುಸಾರವಾಗಿ ಅವರಿಗೆ ಸ್ಥಳಾವಕಾಶವಿರುವುದನ್ನು ಖಾತ್ರಿಪಡಿಸಿಕೊಳ್ಳುವುದು;

(2) ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಪ್ರದೇಶವನ್ನು ವ್ಯಾಪಾರೇತರ ಪ್ರದೇಶವನ್ನಾಗಿ ಘೋಷಿಸುವುದಕ್ಕಾಗಿ ಸ್ಥಳೀಯ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು;

(3) ಬೀದಿ ವ್ಯಾಪಾರಿಗಳಿಗಾಗಿ ಹೊಸದಾದ ನಿವೇಶನಗಳನ್ನು ಮತ್ತು ಜಾಗಗಳನ್ನು ಗುರುತಿಸುವುದು ಹಾಗೂ ಸ್ಥಳೀಯ ಪ್ರಾಧಿಕಾರವು ಅವುಗಳನ್ನು ಅಧಿಸೂಚಿಸುವಂತೆ ಮಾಡುವುದು;

(4) ಸಾರ್ವಜನಿಕ ಸ್ಥಳಗಳಲ್ಲಿ ದಟ್ಟಣೆಯಾಗದಂತೆ ನೋಡಿಕೊಳ್ಳಲು ವ್ಯಾಪಾರಕ್ಕಾಗಿ ಸಮಯವನ್ನು ಗೊತ್ತುಪಡಿಸುವುದು;

(5) ಬೀದಿ ವ್ಯಾಪಾರಿಗಳು ಪ್ರತಿಭಟನೆ ನಡೆಸುವುದರ ವಿರುದ್ಧ ಸೂಕ್ತ ಕ್ರಮಗಳನ್ನು ಜಾರಿಗೊಳಿಸುವಂತೆ ನೋಡಿಕೊಳ್ಳುವುದು;

(6) ಕುಂದುಕೊರತೆಗಳ ನಿವಾರಣೆ ಹಾಗೂ ವಿವಾದ ನಿರ್ಣಯ ಸಮಿತಿ ಮತ್ತು ಸ್ಥಳೀಯ ಪ್ರಾಧಿಕಾರದ ಮುಂದೆ ಬಾಕಿ ಇರುವ ವಿವಾದಿತ ಪ್ರಕರಣಗಳ ಬಗ್ಗೆ ಅನುಸರಣಾ ಕ್ರಮವನ್ನು ಕೈಗೊಳ್ಳುವುದು;

(7) ಬೀದಿ ವ್ಯಾಪಾರ ವೃತ್ತಿಯನ್ನು ಪ್ರೋತ್ಸಾಹಿಸುವ ಯೋಜನೆಯನ್ನು ಸಿದ್ಧಪಡಿಸುವ ಸಂಬಂಧದಲ್ಲಿ ಸ್ಥಳೀಯ ಪ್ರಾಧಿಕಾರಕ್ಕೆ ಶಿಫಾರಸ್ಸುಗಳನ್ನು ನೀಡುವುದು.

(8) ತನ್ನ ಸಭೆಗಳನ್ನು ನಡೆಸಿ, ತನ್ನ ಪ್ರಕಾರ್ಯಗಳು ದಕ್ಷತೆಯಿಂದ ನಿರ್ವಹಣೆಯಾಗುವಂತೆ ನೋಡಿಕೊಳ್ಳಲು ಸೂಕ್ತ ನಿರ್ಣಯಗಳನ್ನು ಕೈಗೊಳ್ಳುವುದು;

(9) ಬೀದಿ ವ್ಯಾಪಾರಿಗಳ ಸನ್ನದನ್ನು ಕನಿಷ್ಠ ಪಕ್ಷ ಒಂದು ಖ್ಯಾತ ಕನ್ನಡ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸುವುದು ಮತ್ತು ಪಟ್ಟಣ ಮಾರಾಟ ಸಮಿತಿಯ ಕಚೇರಿಯಲ್ಲಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಇತರ ಕಛೇರಿಗಳಲ್ಲಿ ಪ್ರದರ್ಶಿಸುವುದು, ಅದರಲ್ಲಿ, ಯಾವ ಸಮಯದೊಳಗಾಗಿ ಬೀದಿ ವ್ಯಾಪಾರಿಗಳಿಗೆ ಮಾರಾಟ ಪ್ರಮಾಣ ಪತ್ರ ನೀಡಬೇಕು ಮತ್ತು ಯಾವ ಸಮಯದೊಳಗಾಗಿ ಅಂತಹ ಮಾರಾಟ ಪ್ರಮಾಣ ಪತ್ರವನ್ನು ನವೀಕರಿಸಬೇಕು ಹಾಗೂ ಅದರಲ್ಲಿ ನಿರ್ದಿಷ್ಟಪಡಿಸಿರುವ ಸಮಯದ ಮಿತಿಯೊಳಗೆ ನೆರವೇರಿಸಬೇಕಾಗಿರುವ ಇತರ ಚಟುವಟಿಕೆಗಳು ಯಾವುವು ಎಂಬುದನ್ನು ನಿರ್ದಿಷ್ಟಪಡಿಸುವುದು;

(10) ನೋಂದಾಯಿತ ಬೀದಿ ವ್ಯಾಪಾರಿಗಳು ಹಾಗೂ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮಾರಾಟ ಪ್ರಮಾಣ ಪತ್ರವನ್ನು ಯಾರಿಗೆ ನೀಡಲಾಗಿದೆಯೋ ಆ ಬೀದಿ ವ್ಯಾಪಾರಿಗಳ ಅಪ್-ಟು-ಡೇಟ್ ದಾಖಲೆಗಳನ್ನು ನಿರ್ವಹಿಸುವುದು ಮತ್ತು ವೆಬ್‌ಸೈಟ್ ಲಭ್ಯವಿದ್ದಲ್ಲಿ, ಅದರಲ್ಲಿ ಅವುಗಳನ್ನು ಪ್ರಕಟಿಸುವುದು.

(11) ವಾರ್ಷಿಕ ಸಮೀಕ್ಷೆಯನ್ನು ನಡೆಸುವುದು ಮತ್ತು ಬೀದಿ ವ್ಯಾಪಾರಿಗಳ ಪಟ್ಟಿಯನ್ನು ಮತ್ತು ಬೀದಿ ವ್ಯಾಪಾರದ ಸ್ಥಳಗಳನ್ನು ಪರಿಶೀಲಿಸುವುದು ಹಾಗೂ ಆ ಸ್ಥಳಗಳನ್ನು ಬೀದಿ ವ್ಯಾಪಾರಿ ಜಾಗಗಳೆಂಬುದಾಗಿ ಅಧಿಸೂಚಿಸುವುದು.

(12) ನಗರ ಸ್ಥಳೀಯ ಸಂಸ್ಥೆ ಮತ್ತು ಸರ್ಕಾರಿ ಯೋಜನೆಗಳ ಮೂಲಕ ಬೀದಿ ಬದಿ ವ್ಯಾಪಾರಿಗಳಿಗೆ ಸಾಮಾಜಿಕ ಭದ್ರತೆ, ಆರೋಗ್ಯ ಹಾಗೂ ಆರ್ಥಿಕ ನೆರವು ನೀಡುವುದು.

(13) ಬೀದಿ ವ್ಯಾಪಾರಿಗಳಿಗಾಗಿ ಹಾಗೂ ಸಾರ್ವಜನಿಕರಿಗಾಗಿ ಮಾಹಿತಿ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.

(14) ಸರ್ಕಾರವು ಮತ್ತು ನಗರ ಸ್ಥಳೀಯ ಸಂಸ್ಥೆಯು ನೀಡುವ ವಿವಿಧ ಸವಲತ್ತುಗಳನ್ನು ಪಡೆದುಕೊಳ್ಳಲು ಬೀದಿ ಬದಿ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡುವುದು.

(15) ಬೀದಿ ವ್ಯಾಪಾರಿಗಳಿಗಾಗಿ ವಾಣಿಜ್ಯ ಮಾರಾಟ ಮೇಳಗಳನ್ನು ಹಾಗೂ ಉತ್ತೇಜನಾ ಕಾರ್ಯಕ್ರಮಗಳನ್ನು ಆಯೋಜಿಸುವುದು.

(16) ಸರ್ಕಾರವು ಗೊತ್ತುಪಡಿಸಿದ ಇತರ ಯಾವುದೇ ಕಾರ್ಯಕ್ರಮ.

**15. ಪಟ್ಟಣ ಮಾರಾಟ ಸಮಿತಿಯ ಸದಸ್ಯರಿಗೆ ಭತ್ಯೆಗಳು.**–ಯಾವುದೇ ಲಾಭಕರ ಹುದ್ದೆಯನ್ನು ಹೊಂದಿರದ ಪಟ್ಟಣ ಮಾರಾಟ ಸಮಿತಿಯ ಸರ್ಕಾರೇತರ ಸದಸ್ಯರುಗಳಿಗೆ ಪಟ್ಟಣ ಮಾರಾಟ ಸಮಿತಿಯ ಪ್ರತಿಯೊಂದು ಸಭೆಯ ಹಾಜರಾತಿಗಾಗಿ ಐದುನೂರು ರೂಪಾಯಿಗಳ ದರದಲ್ಲಿ ಮಾತ್ರವೇ ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು.

**16. ಸಭೆಯಲ್ಲಿ ಸಹವರ್ತಿ/ಸಹ–ಸದಸ್ಯನನ್ನಾಗಿ ಮಾಡಿಕೊಳ್ಳಬಹುದಾದ ವ್ಯಕ್ತಿ.**– ಪಟ್ಟಣ ಮಾರಾಟ ಸಮಿತಿಯು, ಬೀದಿ ವ್ಯಾಪಾರಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಅಭಿಪ್ರಾಯವನ್ನು ರೂಪಿಸಿಕೊಳ್ಳುವ ಸಲುವಾಗಿ ಬೀದಿ ವ್ಯಾಪಾರ ಅಥವಾ ಆ ಸ್ಥಳದ ಯೋಜನೆ, ಪರಿಸರ ಸಂರಕ್ಷಣೆ, ಭೌಗೋಳಿಕ ಮಾಹಿತಿ ವ್ಯವಸ್ಥೆ, ಮಾರುಕಟ್ಟೆ ವಿವಾದಗಳು ಒಳಗೊಂಡಂತೆ, ಅನೌಪಚಾರಿಕ ಆರ್ಥಿಕ ವ್ಯವಸ್ಥೆ ಕ್ಷೇತ್ರದಲ್ಲಿನ ಯಾರೇ ತಜ್ಞ ವ್ಯಕ್ತಿಯನ್ನು ಸಹವರ್ತಿಯನ್ನಾಗಿ ಮಾಡಿಕೊಳ್ಳಬಹುದು, ಅಂತಹ ತಜ್ಞರು ಸಭೆಯಲ್ಲಿ ಚರ್ಚೆಯಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರತಕ್ಕದ್ದು, ಆದರೆ ಸಭೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದಲ್ಲ. ಅಂತಹ ತಜ್ಞರನ್ನು ಪಾರದರ್ಶಕ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಿ,ಆಯುಕ್ತರು, ಉದ್ಯಮಶೀಲತೆ ಮತ್ತು ಜೀವನೋಪಾಯ ಇವರು ನಿರ್ಧರಿಸಬಹುದಾದಂಥ ಗೌರವಧನವನ್ನು ನೀಡತಕ್ಕದ್ದು.

**17. ಸಮಿತಿಯ ನೌಕರರು.**– (1) ಪಟ್ಟಣ ಮಾರಾಟ ಸಮಿತಿಯು, ಸ್ಥಳೀಯ ಪ್ರಾಧಿಕಾರವು ಹಂಚಿಕೆ ಮಾಡಿದ ಸ್ಥಳದಲ್ಲಿ ಅದರ ಖಾಯಂ ಕಛೇರಿಗಳನ್ನು ಹೊಂದಿರತಕ್ಕದ್ದು. ಎಲ್ಲಾ ಸದಸ್ಯರುಗಳನ್ನು ಒಳಗೊಂಡಂತೆ ಸಭೆಯನ್ನು ನಡೆಸುವುದಕ್ಕಾಗಿ ಸ್ಥಳೀಯ ಪ್ರಾಧಿಕಾರವು ಸಾಕಷ್ಟು ಸ್ಥಳಾವಕಾಶವನ್ನು ಹಂಚಿಕೆ ಮಾಡತಕ್ಕದ್ದು.

(2) ಸ್ಥಳೀಯ ಪ್ರಾಧಿಕಾರವು, ಸಮಿತಿಯ ಕೋರಿಕೆಯಂತೆ ಅದರ ವೆಚ್ಚದಲ್ಲಿ ಸಾಕಷ್ಟು ಸಿಬ್ಬಂದಿಯನ್ನು ಒದಗಿಸತಕ್ಕದ್ದು. ಆದರೆ ಸಮಿತಿಯು ಸಿಬ್ಬಂದಿ ವೆಚ್ಚಕ್ಕೆ ಸಂಬಂಧಿಸಿದಂತೆ ಖಾಯಂ ಆರ್ಥಿಕ ಮೂಲ ಹೊಣೆಯನ್ನು ಸೃಜಿಸಿಕೊಳ್ಳತಕ್ಕದ್ದಲ್ಲ.

## ಅಧ್ಯಾಯ– III
## ಕುಂದುಕೊರತೆ ನಿವಾರಣಾ ವ್ಯವಸ್ಥೆ

**18. ಕುಂದುಕೊರತೆ ನಿವಾರಣಾ ಸಮಿತಿಯ ರಚನೆ.–** (1) ಅಧಿನಿಯಮದ 20ನೇ ಪ್ರಕರಣದ(1)ನೇ ಉಪ–ಪ್ರಕರಣದ ಅಡಿಯಲ್ಲಿ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರಕ್ಕಾಗಿ ಸರ್ಕಾರವು ರಚಿಸಿದ ಒಂದು ಕುಂದು ಕೊರತೆ ನಿವಾರಣಾ ಸಮಿತಿಯು ಇರತಕ್ಕದ್ದು.

(2) ಸರ್ಕಾರವು, ಕುಂದುಕೊರತೆ ನಿವಾರಣಾ ಸಮಿತಿಯ ಅಧಿಕಾರ ವ್ಯಾಪ್ತಿಯ ಪ್ರದೇಶವನ್ನು ಮತ್ತು ಕೇಂದ್ರ ಕಾರ್ಯ ಸ್ಥಾನವನ್ನು ನಿರ್ಧರಿಸತಕ್ಕದ್ದು.

(3) (ಎ) ಸರ್ಕಾರವು, ನಿವೃತ್ತ ಸಿವಿಲ್ ನ್ಯಾಯಾಧೀಶರನ್ನು ಅಥವಾ ನ್ಯಾಯಿಕ ಮ್ಯಾಜಿಸ್ಟ್ರೇಟ್‌ರನ್ನು ಕುಂದುಕೊರತೆ ನಿವಾರಣಾ ಸಮಿತಿಯ ಅಧ್ಯಕ್ಷರನ್ನಾಗಿ ಹಾಗೂ ಇತರ ಇಬ್ಬರು ವ್ಯಕ್ತಿಗಳನ್ನು ಸದಸ್ಯರನ್ನಾಗಿ ನೇಮಕ ಮಾಡತಕ್ಕದ್ದು.

(ಬಿ) ಸಮಿತಿಯ ಇತರೆ ಇಬ್ಬರು ಸದಸ್ಯರ ಪೈಕಿ, ಒಬ್ಬ ಸದಸ್ಯರು, ಸ್ಥಳೀಯ ಪ್ರದೇಶದ ಕಳಂಕರಹಿತ ಸೇವಾ ದಾಖಲೆಯುಳ್ಳ ರಾಜ್ಯ ಸರ್ಕಾರದ ನಿವೃತ್ತ "ಎ" ದರ್ಜೆ ಅಧಿಕಾರಿಯಾಗಿರತಕ್ಕದ್ದು ಮತ್ತು 65 ವರ್ಷದೊಳಗಿನ ವಯೋಮಾನದವರಾಗಿರತಕ್ಕದ್ದು. ಸಮಿತಿಯ ಇನ್ನೊಬ್ಬ ಸದಸ್ಯರು, ಸ್ಥಳೀಯ ಪ್ರದೇಶದಲ್ಲಿ ಬೀದಿ ವ್ಯಾಪಾರವನ್ನು ಒಳಗೊಂಡ ಅನೌಪಚಾರಿಕ ಆರ್ಥಿಕ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಪ್ರಖ್ಯಾತ ಸಾಮಾಜಿಕ ಕಾರ್ಯಕರ್ತರಾಗಿರತಕ್ಕದ್ದು ಮತ್ತು 65 ವರ್ಷದೊಳಗಿನ ವಯೋಮಾನದವರಾಗಿರತಕ್ಕದ್ದು.

(4) ಕುಂದುಕೊರತೆ ನಿವಾರಣಾ ಸಮಿತಿಯ ಅವಧಿಯು ಐದು ವರ್ಷಗಳಾಗಿರತಕ್ಕದ್ದು.

(5) ಕುಂದುಕೊರತೆ ನಿವಾರಣಾ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಈ ಕೆಳಕಂಡ ಕನಿಷ್ಠ ಮಾರ್ಗಸೂಚಿಗಳ ಅನುಸಾರ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಸಂಭಾವನೆಯನ್ನು ಸಂದಾಯ ಮಾಡತಕ್ಕದ್ದು.

(ಎ) ನಿವೃತ್ತ ಸಿವಿಲ್ ನ್ಯಾಯಾಧೀಶರನ್ನು ಅಥವಾ ನ್ಯಾಯಿಕ ಮಾಜಿಸ್ಟ್ರೇಟರನ್ನು, ಅರೆಕಾಲಿಕ ಆಧಾರದಲ್ಲಿ ನೇಮಕ ಮಾಡಿಕೊಂಡಿದ್ದರೆ, ಪ್ರತಿದಿನದ ಉಪವೇಶನಕ್ಕೆ ಎರಡು ಸಾವಿರದ ಐದು ನೂರು ರೂಪಾಯಿಗಳ ಗೌರವಧನವನ್ನು ಸಂದಾಯಮಾಡತಕ್ಕದ್ದು.

(ಬಿ) ಸಮಿತಿಯ ಕಾರ್ಯಾಚರಣೆಯ ವ್ಯಾಪ್ತಿ ಪ್ರದೇಶವನ್ನು ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸತಕ್ಕದ್ದು.

(ಸಿ) ಕುಂದುಕೊರತೆ ನಿವಾರಣಾ ಸಮಿತಿಯ ಇತರ ಸದಸ್ಯರನ್ನು ಅರೆಕಾಲಿಕ ಆಧಾರದಲ್ಲಿ ನೇಮಕ ಮಾಡಿಕೊಂಡಿದ್ದರೆ, ಪ್ರತಿದಿನದ ಉಪವೇಶನಕ್ಕೆ ಒಂದು ಸಾವಿರ ರೂಪಾಯಿಗಳ ಗೌರವಧನವನ್ನು ಸಂದಾಯ ಮಾಡತಕ್ಕದ್ದು.

**19. ಉಪವೇಶನದ ಸ್ಥಳ.–** (1) ಕುಂದುಕೊರತೆ ನಿವಾರಣಾ ಸಮಿತಿಯು, ಪೌರಸಭಾ ಕಚೇರಿಯಲ್ಲಿ ಅಥವಾ ಪೌರಸಭೆಯು ಸರ್ಕಾರದೊಂದಿಗೆ ಸಮಾಲೋಚಿಸಿ ಅಧಿಸೂಚಿಸಬಹುದಾದ ಸಂಬಂಧಪಟ್ಟ ಪೌರಸಭಾ ಪ್ರದೇಶ ವ್ಯಾಪ್ತಿಯೊಳಗಿರುವಂಥ ಇತರ ಸ್ಥಳದಲ್ಲಿ ಇರತಕ್ಕದ್ದು.

(2) ಕುಂದುಕೊರತೆ ನಿವಾರಣಾ ಸಮಿತಿಯ ಕೆಲಸದ ದಿನಗಳು ಹಾಗೂ ಕಛೇರಿ ವೇಳೆಯು, ಸರ್ಕಾರಿ ಕಛೇರಿಯ ವೇಳೆಯಂತೆಯೇ ಇರತಕ್ಕದ್ದು.

(3) ಕುಂದುಕೊರತೆ ನಿವಾರಣಾ ಸಮಿತಿಯ ಕಛೇರಿಯ ಮೊಹರು ಮತ್ತು ಲಾಂಛನವು ಸಂಬಂಧಪಟ್ಟ ಪೌರಸಭೆಯಂತಹುದೇ ಆಗಿರತಕ್ಕದ್ದು ಹಾಗೂ ಅವುಗಳನ್ನು ಕುಂದುಕೊರತೆ ನಿವಾರಣಾ ಸಮಿತಿಯ ಅಧ್ಯಕ್ಷರು ಅಧಿಕೃತಗೊಳಿಸಿದ ಅಧಿಕಾರಿಯ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳತಕ್ಕದ್ದು.

**20. ಕುಂದುಕೊರತೆ ನಿವಾರಣಾ ಸಮಿತಿಗೆ ಸಲ್ಲಿಸುವ ಅರ್ಜಿಯ ನಮೂನೆ ಮತ್ತು ವಿಧಾನ.–**(1) ಈ ಅಧಿನಿಯಮದ ಅಥವಾ ನಿಯಮಗಳ (ಅಧಿನಿಯಮದ 11ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವುದನ್ನು ಹೊರತುಪಡಿಸಿ) ಉಪಬಂಧದ ಮೇರೆಗೆ ಮಾಡಲಾದ ಯಾವುದೇ ಕಾರ್ಯಕ್ಕೆ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮಕ್ಕೆ ಸಂಬಂಧಿಸಿದಂತೆ, ಕುಂದುಕೊರತೆ ಅಥವಾ ಸಮಸ್ಯೆಯ ಬಗ್ಗೆ ಯಾರೇ ಬೀದಿ ವ್ಯಾಪಾರಿಯು, ಕುಂದುಕೊರತೆ ನಿವಾರಣಾ ಸಮಿತಿಗೆ ನಮೂನೆ–IVರಲ್ಲಿ ತಾನಾಗಿಯೇ ಆಗಲಿ ಅಥವಾ ತನ್ನ ಪ್ರತಿನಿಧಿಯ ಮೂಲಕವಾಗಲಿ ಲಿಖಿತದಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

(2) ಅಂಥ ಅರ್ಜಿಯನ್ನು ಬೀದಿ ವ್ಯಾಪಾರಿಯು ಕುಂದುಕೊರತೆ ಅಥವಾ ಸಮಸ್ಯೆಗೆ ಕಾರಣವಾದ ಯಾವುದೇ ಘಟನೆಯು ಸಂಭವಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ಸಲ್ಲಿಸತಕ್ಕದ್ದು:

ಪರಂತು, ನಿಗದಿತ ಸಮಯದೊಳಗೆ ಅರ್ಜಿಯನ್ನು ಸಲ್ಲಿಸುವುದಕ್ಕೆ ಅರ್ಜಿದಾರನಿಗೆ ಸಾಕಷ್ಟು ಕಾರಣಗಳಿಂದ ಅಡ್ಡಿಯಾಗಿತ್ತು ಎಂಬುದನ್ನು ಕುಂದುಕೊರತೆ ನಿವಾರಣಾ ಸಮಿತಿಗೆ ಮನದಟ್ಟಾದ ಸಂದರ್ಭದಲ್ಲಿ ಅದು ಆ ವಿಳಂಬವನ್ನು ಮನ್ನಾ ಮಾಡಬಹುದು.

(3) ಕುಂದುಕೊರತೆ ನಿವಾರಣಾ ಸಮಿತಿಯು ಈ ಕೆಳಕಂಡ ಅರ್ಜಿಗಳನ್ನು ಪುರಸ್ಕರಿಸತಕ್ಕದ್ದಲ್ಲ, –

(ಎ) ಅರ್ಜಿಯು ಅನಾಮಧೇಯವಾಗಿದ್ದರೆ ಅಥವಾ ಅದು ಸಾಮಾನ್ಯ ಮತ್ತು ಅಸ್ಪಷ್ಟ ಆರೋಪಗಳನ್ನು ಒಳಗೊಂಡಿದ್ದರೆ;

(ಬಿ) ಅರ್ಜಿಯ ವಿಷಯವು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣದ ಅಥವಾ ನ್ಯಾಯಿಕ ಅಥವಾ ಅರೆನ್ಯಾಯಿಕ ಪ್ರಾಧಿಕಾರದ ವಿಚಾರಣಾಧೀನ ವಿಷಯವಾಗಿದ್ದರೆ;

(ಸಿ) ಆ ವಿಷಯವು ಅಧಿನಿಯಮದ ವ್ಯಾಪ್ತಿಯನ್ನು ಮೀರಿದ್ದರೆ, ಮತ್ತು

(ಡಿ) ಅರ್ಜಿದಾರನು ಅರ್ಜಿಯನ್ನು ಸಲ್ಲಿಸುವ ಹಕ್ಕನ್ನು ಹೊಂದಿಲ್ಲದಿದ್ದರೆ,

4. ಅರ್ಜಿಯನ್ನು ಯಾವ ಆದೇಶ ಅಥವಾ ನೋಟೀಸಿನ ವಿರುದ್ಧ ಸಲ್ಲಿಸಲಾಗಿದೆಯೋ ಆ ಆದೇಶ ಅಥವಾ ನೋಟೀಸ್ ಯಾವುದಾದರೂ ಇದ್ದರೆ, ಅದರ ಪ್ರತಿಯನ್ನು ಮತ್ತು ಇತರ ಸಂಬಂಧಪಟ್ಟ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

**21. ಕುಂದುಕೊರತೆ ನಿವಾರಣಾ ಸಮಿತಿಯು ಅಹವಾಲನ್ನು ಆಲಿಸುವ ವಿಧಾನ.–** (1) 20ನೇ ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಆ ಅರ್ಜಿಯ ವಿಷಯದಲ್ಲಿ ಮೇಲ್ನೋಟಕ್ಕೆ ಹುರುಳಿದೆ ಎಂದು ಕಂಡು ಬರುವಂತಹದ್ದಾಗಿದೆಯೇ ಮತ್ತು ಅರ್ಜಿದಾರನ ಪರವಾಗಿ ಸಮತೋಲಿತ ಪರಿಹಾರ ನೀಡುವುದೇನಾದರೂ ಇದೆಯೇ ಎಂಬುದನ್ನು ನಿರ್ಧರಿಸುವ ಸಲುವಾಗಿ ಕುಂದುಕೊರತೆ ನಿವಾರಣಾ ಸಮಿತಿಯು ಅರ್ಜಿದಾರನನ್ನು ಪ್ರಾರಂಭಿಕ ವಿಚಾರಣೆ ಮಾಡತಕ್ಕದ್ದು. ಅಂತಹ ಅರ್ಜಿಯ ಇತ್ಯರ್ಥದ ಅವಧಿಯಲ್ಲಿ ಅರ್ಜಿದಾರರು ಮಧ್ಯಂತರ ಪರಿಹಾರವನ್ನು ಸಹ ಕೋರಬಹುದು.

(2) ಪ್ರಾರಂಭಿಕ ವಿಚಾರಣೆಯ ಫಲಿತಾಂಶವನ್ನು ವಿಚಾರಣೆ ಮುಕ್ತಾಯವಾದಾಗ ಘೋಷಿಸತಕ್ಕದ್ದು ಮತ್ತು ಅದನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು ಹಾಗೂ ಅರ್ಜಿದಾರನಿಗೆ ಅದನ್ನು ತಿಳಿಸತಕ್ಕದ್ದು. ಬೀದಿ ವ್ಯಾಪಾರಿಯು, ಮಧ್ಯಂತರ ಪರಿಹಾರವೇನಾದರೂ ಕೋರಿದರೆ, ಸಮಿತಿಯು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಮಂಜೂರು ಮಾಡಬಹುದು ಅಥವಾ ತಿರಸ್ಕರಿಸಬಹುದು.

(3) ಆ ಪ್ರಕರಣವು ಮೇಲ್ನೋಟಕ್ಕೆ ಹುರುಳಿರುವ ಪ್ರಕರಣವೆಂದು ಸಮಿತಿಯು ಅಭಿಪ್ರಾಯಪಟ್ಟಲ್ಲಿ, ಕುಂದುಕೊರತೆ ಅಥವಾ ವಿವಾದದ ವಿವರಗಳನ್ನು ಒಳಗೊಂಡಿರುವ ಒಂದು ನೋಟೀಸನ್ನು ಸಾರ್ವಜನಿಕ ಪ್ರಾಧಿಕಾರಕ್ಕೆ ನೀಡತಕ್ಕದ್ದು.

(4) ಸಾರ್ವಜನಿಕ ಪ್ರಾಧಿಕಾರವು ಅಂಥ ನೋಟೀಸನ್ನು ಸ್ವೀಕರಿಸಿದ ಮೇಲೆ, ಸಮಿತಿಯು ನಿರ್ಧರಿಸಬಹುದಾದ ಅವಧಿಯೊಳಗಾಗಿ ಪ್ರತ್ಯುತ್ತರವನ್ನು ಸಲ್ಲಿಸತಕ್ಕದ್ದು ಮತ್ತು ಪ್ರತ್ಯುತ್ತರದ ಒಂದು ಪ್ರತಿಯನ್ನು ಉಚಿತವಾಗಿ ಬೀದಿ ವ್ಯಾಪಾರಿಗೂ ಸಹ ಒದಗಿಸತಕ್ಕದ್ದು.

(5) ಸಾರ್ವಜನಿಕ ಪ್ರಾಧಿಕಾರವು ಸಲ್ಲಿಸಿದ ಲಿಖಿತ ಪ್ರತ್ಯುತ್ತರವನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ವಾರಗಳ ಅವಧಿಯೊಳಗೆ ಬೀದಿ ವ್ಯಾಪಾರಿಯು ಎದುರುತ್ತರವನ್ನು ಸಲ್ಲಿಸಬಹುದು.

(6) ಅರ್ಜಿದಾರ ಅಥವಾ ಪ್ರತ್ಯರ್ಜಿದಾರನ ನಡುವಿನ ವಾದ ವಿವಾದಗಳಿಗೆ ಸಂಬಂಧಿಸಿದಂತೆ ಮತ್ತು ಸಮಿತಿಯ ಮುಂದೆ ಮಂಡಿಸಲಾದ ದಾಖಲೆಗಳಿಗೆ ಸಂಬಂಧಿಸಿದಂತೆ ಕುಂದುಕೊರತೆ ನಿವಾರಣಾ ಸಮಿತಿಯು, ಅದರ ಒಬ್ಬ ಸದಸ್ಯರನ್ನು ಅಥವಾ ಸ್ಥಳೀಯ ಪ್ರಾಧಿಕಾರದ ಒಬ್ಬ ಅಧಿಕಾರಿಯನ್ನು ಕ್ಷೇತ್ರ ವಿಚಾರಣೆಗಾಗಿ ನಿಯೋಜಿಸಿ ಆದೇಶಿಸಬಹುದು.

(7) ಕುಂದುಕೊರತೆ ನಿವಾರಣಾ ಸಮಿತಿಯು ಉಭಯ ಪಕ್ಷಕಾರರ ಅಹವಾಲನ್ನು ಆಲಿಸಿದ ನಂತರ, ಇಬ್ಬರೂ ಪಕ್ಷಕಾರರ ಅಹವಾಲನ್ನು ಆಲಿಸುವುದು ಮುಕ್ತಾಯಗೊಂಡ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗಾಗಿ ತೀರ್ಮಾನ ಕೈಗೊಳ್ಳುವುದಕ್ಕಾಗಿರುವ ಕಾರಣಗಳ ಸಹಿತ ಲಿಖಿತದಲ್ಲಿ ಆದೇಶವನ್ನು ಮಾಡಬಹುದು.

(8) ಕುಂದುಕೊರತೆ ನಿವಾರಣಾ ಸಮಿತಿಯ ತೀರ್ಮಾನದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದರೆ, ಮೇಲ್ಮನವಿ ಸಮಿತಿಯು ಆ ತೀರ್ಮಾನಕ್ಕೆ ತಡೆಯಾಜ್ಞೆ ನೀಡಿದ್ದ ಹೊರತು, ಆ ತೀರ್ಮಾನಕ್ಕೆ ಪಕ್ಷಕಾರರು ಬದ್ಧರಾಗಿರತಕ್ಕದ್ದು.

## ಅಧ್ಯಾಯ–IV

## ಮೇಲ್ಮನವಿಗಳು

**22. ಮೇಲ್ಮನವಿಯನ್ನು ವಿಚಾರಣೆ ಮಾಡುವ ಸಮಿತಿ.–** ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು, ಸರ್ವಸದಸ್ಯರ ಸಭೆಯಲ್ಲಿ ನಿರ್ಧರಿಸಲಾದಂತೆ 23ನೇ ನಿಯಮದ ಮೇರೆಗೆ ಮೇಲ್ಮನವಿಗಳನ್ನು ವಿಚಾರಣೆ ಮಾಡುವುದಕ್ಕಾಗಿ ಮೇಲ್ಮನವಿ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುವುದಕ್ಕೆ ಸಂದರ್ಭಾನುಸಾರ, ಮೇಯರ್ ಅಥವಾ ಅಧ್ಯಕ್ಷರು ಅದರ ಅಧ್ಯಕ್ಷರಾಗಿರುವ ಮತ್ತು ಸ್ಥಳೀಯ ಪ್ರಾಧಿಕಾರದ ಇಬ್ಬರು ಇತರ ಸದಸ್ಯರನ್ನು ಒಳಗೊಂಡಿರುವ ಒಂದು ಸಮಿತಿಯೊಂದನ್ನು ರಚಿಸತಕ್ಕದ್ದು.

**23. ಕುಂದುಕೊರತೆ ನಿವಾರಣಾ ಸಮಿತಿಯ ಮತ್ತು ಪಟ್ಟಣ ಮಾರಾಟ ಸಮಿತಿಯ ಆದೇಶ ಹಾಗೂ ತೀರ್ಮಾನದ ವಿರುದ್ಧ ಮೇಲ್ಮನವಿ.–** (1) ಕುಂದುಕೊರತೆ ನಿವಾರಣಾ ಸಮಿತಿಯ ಮತ್ತು ಪಟ್ಟಣ ಮಾರಾಟ ಸಮಿತಿಯ ಆದೇಶ ಅಥವಾ ತೀರ್ಮಾನದ ವಿರುದ್ಧಬಾಧಿತ ವ್ಯಕ್ತಿಯು, ಅನುಕ್ರಮವಾಗಿ ನಮೂನೆ–**VI** ಮತ್ತು ನಮೂನೆ–**V** ರಲ್ಲಿ ಅಂತಹ ಆದೇಶ ಅಥವಾ ತೀರ್ಮಾನವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ 22ನೇ ನಿಯಮದ ಅಡಿಯಲ್ಲಿ ರಚಿತವಾದ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸತಕ್ಕದ್ದು:

ಪರಂತು, ನಿಗದಿತ ಸಮಯದೊಳಗಾಗಿ ಮೇಲ್ಮನವಿಯನ್ನು ಸಲ್ಲಿಸುವುದಕ್ಕೆ ಸಾಕಷ್ಟು ಯುಕ್ತ ಕಾರಣದಿಂದ ಅರ್ಜಿದಾರನಿಗೆ ಅಡ್ಡಿಯಾಗಿತ್ತು ಎಂದು ಮೇಲ್ಮನವಿ ಪ್ರಾಧಿಕಾರಕ್ಕೆ ಮನದಟ್ಟಾದರೆ, ಮೇಲ್ಮನವಿ ಪ್ರಾಧಿಕಾರವು ಆ ವಿಳಂಬವನ್ನು ಮನ್ನಿಸಬಹುದು.

(2) ಮೇಲ್ಮನವಿಯು ನಿವೇದನಾ ಪತ್ರದ ರೂಪದಲ್ಲಿರತಕ್ಕದ್ದು ಹಾಗೂ ಮೇಲ್ಮನವಿದಾರನು ಅದಕ್ಕೆ ಸಹಿ ಮಾಡಿರತಕ್ಕದ್ದು ಮತ್ತು ಅವನು ಅದನ್ನು ಖುದ್ದಾಗಿ ಅಥವಾ ತನ್ನ ಅಧಿಕೃತ ಪ್ರತಿನಿಧಿಯ ಮೂಲಕ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(3) ಮೇಲ್ಮನವಿಯನ್ನುಯಾವುದರ ವಿರುದ್ಧ ಸಲ್ಲಿಸಲಾಗಿದೆಯೋ ಆ ಆದೇಶದ ಮೂಲ ಪ್ರತಿಯನ್ನು ಅಥವಾ ಆ ಆದೇಶದ ಪ್ರಮಾಣೀಕೃತ ಪ್ರತಿ ಯಾವುದಾದರೂ ಇದ್ದರೆ, ಅದನ್ನು ಮೇಲ್ಮನವಿ ನಿವೇದನಾ ಪತ್ರದೊಂದಿಗೆ ಲಗತ್ತಿಸತಕ್ಕದ್ದು.

(4) ಮೇಲ್ಮನವಿಯು ತ್ರಿಪ್ರತಿಯಲ್ಲಿರತಕ್ಕದ್ದು ಹಾಗೂ ಇನ್ನೂರು ರೂಪಾಯಿಗಳ ಶುಲ್ಕದೊಂದಿಗೆ ಲಗತ್ತಾಗಿರತಕ್ಕದ್ದು.

(5) ಮೇಲ್ಮನವಿಯ ಪ್ರತಿಯನ್ನು ಅದರ ಸ್ವೀಕೃತಿಯ ಸಹಿತ ಪ್ರತಿವಾದಿಗೆ ಕೊಟ್ಟ ಹೊರತು ಅಂತಹ ಮೇಲ್ಮನವಿಯನ್ನು ಪುರಸ್ಕರಿಸತಕ್ಕದ್ದಲ್ಲ.

**24. ಮೇಲ್ಮನವಿ ಸಮಿತಿಯು ಮೇಲ್ಮನವಿಗಳನ್ನು ವಿಚಾರಣೆ ಮಾಡುವ ಕಾರ್ಯವಿಧಾನ.–** (1) ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಅಧಿಕಾರಿಯು ಅಥವಾ ವ್ಯಕ್ತಿಯು, ಮೇಲ್ಮನವಿಯನ್ನು ನಮೂದು ಮಾಡುವ ಉದ್ದೇಶಕ್ಕಾಗಿ ಸಂಬಂಧಟ್ಟ ಸ್ಥಳೀಯ ಪ್ರಾಧಿಕಾರವು ಇಟ್ಟಿರುವ ರಿಜಿಸ್ಟರ್‌ನಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ ದಿನಾಂಕದ ಸಹಿತ ನಮೂದಿಸತಕ್ಕದ್ದು.

(2) 22ನೇ ನಿಯಮದ ಅಡಿಯಲ್ಲಿ ರಚಿಸಲಾದ ಮೇಲ್ಮನವಿ ಪ್ರಾಧಿಕಾರದ ಮುಂದೆ ಮೇಲ್ಮನವಿಯನ್ನು ಮಂಡಿಸತಕ್ಕದ್ದು. ಸಮಿತಿಯು ಮೇಲ್ಮನವಿಯ ವಿಚಾರಣೆಗೆ ದಿನಾಂಕವನ್ನು ನಿಗದಿಪಡಿಸತಕ್ಕದ್ದು, ಆ ದಿನಾಂಕವು ಮೇಲ್ಮನವಿಯನ್ನು ದಾಖಲಿಸಿದ ದಿನಾಂಕದಿಂದ ಮೂವತ್ತು ದಿನಗಳನ್ನು ಮೀರತಕ್ಕದ್ದಲ್ಲ ಮತ್ತು ಸಂಬಂಧಪಟ್ಟವರಿಗೆ ವಿಚಾರಣೆಯ ನೋಟಿಸನ್ನು ಜಾರಿ ಮಾಡಿಸತಕ್ಕದ್ದು.

(3) ಮೇಲ್ಮನವಿ ಸಮಿತಿಯ ಮುಂದೆ ಸಂಬಂಧಪಟ್ಟವರು ಮಂಡಿಸಿರುವ ವಾದಗಳು ಮತ್ತು ಪ್ರಕರಣದ ದಾಖಲೆಗಳ ಆಧಾರದ ಮೇಲೆ, ಮೇಲ್ಮನವಿ ಸಮಿತಿಯು ಮೇಲ್ಮನವಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಸೂಕ್ತವೆಂದು ನಿರ್ಧರಿಸಬಹುದಾದಂಥ ಆದೇಶವನ್ನು ಮಾಡತಕ್ಕದ್ದು.

## ಅಧ್ಯಾಯ– V

## ಸಂಕೀರ್ಣ

**25. ಬೀದಿ ವ್ಯಾಪಾರಿಗಳ ಅಪ್–ಟು–ಡೇಟ್ ದಾಖಲೆಗಳನ್ನು ನಿರ್ವಹಿಸುವ ವಿಧಾನ.–** (1) ಪಟ್ಟಣ ಮಾರಾಟ ಸಮಿತಿಯ ಕಾರ್ಯಾಲಯವು ಸಮಿತಿಯ ಕಾಗದ ರೂಪದ ದಾಖಲೆಗಳನ್ನು ಸ್ಥಳೀಯ ಪ್ರಾಧಿಕಾರವು ಹಂಚಿಕೆ ಮಾಡಿದ ಸ್ಥಳದಲ್ಲಿ ನಿರ್ವಹಣೆ ಮಾಡತಕ್ಕದ್ದು ಹಾಗೂ ಅದರ ಸಾಫ್ಟ್‌ಕಾಪಿಯನ್ನೂ ಸಹ ಸೂಕ್ತ ರೀತಿಯಲ್ಲಿ ನಿರ್ವಹಿಸತಕ್ಕದ್ದು, ಪಟ್ಟಣ ಮಾರಾಟ ಸಮಿತಿಯು ತೆಗೆದುಕೊಂಡ ಎಲ್ಲಾ ತೀರ್ಮಾನಗಳನ್ನು ನಿಗದಿಪಡಿಸಲಾದ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.

(2) ಬೀದಿ ವ್ಯಾಪಾರಿಗಳಿಗೆ ಹಂಚಿಕೆ ಮಾಡಿದ ಸ್ಥಳಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹತ್ತು ವರ್ಷಗಳವರೆಗೆ ಸಂರಕ್ಷಿಸತಕ್ಕದ್ದು. ಇತರೆ ದಾಖಲೆಗಳನ್ನು ಯಾವುದೇ ಕಾನೂನು ವ್ಯವಹರಣೆಗಳಿಗಾಗಿ ಅಗತ್ಯವಿರುವುದನ್ನು ಹೊರತುಪಡಿಸಿ, ಐದು ವರ್ಷಗಳ ಅವಧಿಯವರೆಗೆ ಸಂರಕ್ಷಿಸಿಡತಕ್ಕದ್ದು.

(3) ಅಸ್ತಿತ್ವದಲ್ಲಿರುವ ಬೀದಿ ವ್ಯಾಪಾರ ಸ್ಥಳದ ಬೀದಿ ಮತ್ತು ರಸ್ತೆಯ ನಕ್ಷೆಯು ಪಟ್ಟಣ ಮಾರಾಟ ಸಮಿತಿಯ ಖಾಯಂ ದಾಖಲೆಯಾಗಿರತಕ್ಕದ್ದು.

**26. ಯೋಜನೆಯ ಸಂಕ್ಷಿಪ್ತ ವಿವರವನ್ನು ಪ್ರಕಟಿಸುವ ವಿಧಾನ.–**ಅಧಿನಿಯಮದ 38ನೇ ಪ್ರಕರಣದ ಮೇರೆಗೆ ಸರ್ಕಾರವು ಅಧಿಸೂಚಿಸಿದ ಯೋಜನೆಯ ಸಂಕ್ಷಿಪ್ತ ವಿವರವನ್ನು ಸ್ಥಳೀಯ ಪ್ರಾಧಿಕಾರವು ಕನ್ನಡ ಭಾಷೆಯ ಎರಡು ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು. ಸ್ಥಳೀಯ ಪ್ರಾಧಿಕಾರವು ಅಂತಹ ಯೋಜನೆಯ ಪ್ರಕಟಣೆಯನ್ನು ಸರ್ಕಾರವು ಯೋಜನೆಯನ್ನು ಅಧಿಸೂಚಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಮಾಡತಕ್ಕದ್ದು.

**27. ಸರ್ಕಾರಕ್ಕೆ ವಿವರಗಳನ್ನು ಒದಗಿಸುವುದು.– (1)** ಪ್ರತಿಯೊಂದು ಪಟ್ಟಣ ಮಾರಾಟ ಸಮಿತಿಯು, 30ನೇ ಪ್ರಕರಣದ ಮೇರೆಗೆ ಅಗತ್ಯವಿರುವಂತಹ ವಿವರಗಳನ್ನು ನಮೂನೆ VIIರಲ್ಲಿ ನಿರ್ದಿಷ್ಟಪಡಿಸಲಾದ ವಿವರಗಳೊಂದಿಗೆ ಆನ್‌ಲೈನ್ ಮೂಲಕ ಸರ್ಕಾರಕ್ಕೆ ಕಾಲ–ಕಾಲಕ್ಕೆ ಒದಗಿಸತಕ್ಕದ್ದು.

(2) ಸರ್ಕಾರವು ಕಾಲ–ಕಾಲಕ್ಕೆ ಅಗತ್ಯವಿರುವಂಥ ಇತರೆ ವಿವರಗಳನ್ನು ಇತರ ನಮೂನೆಯಲ್ಲಿ ಒದಗಿಸುವಂತೆ ಪಟ್ಟಣ ಮಾರಾಟ ಸಮಿತಿಯನ್ನು ಕೋರಬಹುದು.

**28. ವಾರ್ಷಿಕ ವರದಿ.–** ಹಣಕಾಸು ವರ್ಷವು ಮುಕ್ತಾಯಗೊಂಡ ತರುವಾಯ, ಮೂರು ತಿಂಗಳೊಳಗೆ ಪಟ್ಟಣ ಮಾರಾಟ ಸಮಿತಿಯು ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ನಿಗಧಿಪಡಿಸಲಾದ ವೆಬ್‌ಸೈಟ್‌ಗೆ ಅದನ್ನು ಅಪ್‌ಲೋಡ್ ಮಾಡತಕ್ಕದ್ದು.

**29. ಅರ್ಥ ವಿವರಣೆ ಮತ್ತು ತೊಂದರೆಗಳ ನಿವಾರಣೆ.–** ಈ ನಿಯಮಗಳ ಉಪಬಂಧಗಳನ್ನು ಜಾರಿಗೊಳಿಸುವುದಕ್ಕೆ ಅಥವಾ ಯಾವುದೇ ನಿಯಮದ ಅರ್ಥ ವಿವರಣೆಗೆ ಸಂಬಂಧಿಸಿದಂತೆ ಯಾವುವೇ ತೊಂದರೆಗಳು ಉದ್ಭವಿಸಿದಲ್ಲಿ, ಆ ವಿಷಯವನ್ನು ಸರ್ಕಾರದ ಗಮನಕ್ಕೆ ತರತಕ್ಕದ್ದು ಹಾಗೂ ಸರ್ಕಾರವು ಅದರ ಮೇಲೆ ತೆಗೆದುಕೊಂಡ ತೀರ್ಮಾನವೇ ಅಂತಿಮವಾಗಿರುತ್ತದೆ.

**ಅನುಸೂಚಿ**
**(5ನೇ ನಿಯಮ ನೋಡಿ)**

**ಸ್ಥಳೀಯ ಪ್ರಾಧಿಕಾರದ ಪ್ರದೇಶದಲ್ಲಿ ಬೀದಿ ವ್ಯಾಪಾರಿಗಳನ್ನು ಪ್ರತಿನಿಧಿಸುವ ಪಟ್ಟಣ ಮಾರಾಟ ಸಮಿತಿಯ ಸದಸ್ಯರುಗಳ ಚುನಾವಣೆಗಳನ್ನು ನಡೆಸುವ ಪ್ರಕ್ರಿಯೆ.**

(1) ಸರ್ಕಾರದ ನಿರ್ದೇಶನಗಳಿಗೊಳಪಟ್ಟು, ಕರ್ನಾಟಕದ ಸಹಕಾರ ಸಂಘಗಳ ಚುನಾವಣಾ ಪ್ರಾಧಿಕಾರವು, ಬೀದಿ ವ್ಯಾಪಾರಿಗಳನ್ನು ಪ್ರತಿನಿಧಿಸುವ ಪಟ್ಟಣ ಮಾರಾಟ ಸಮಿತಿಯ ಸದಸ್ಯರುಗಳ ಚುನಾವಣೆ ನಡೆಸುವ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡತಕ್ಕದ್ದು, ನಿರ್ದೇಶನ ನೀಡತಕ್ಕದ್ದು ಹಾಗೂ ನಿಯಂತ್ರಿಸತಕ್ಕದ್ದು.

(2) ಸ್ಥಳೀಯ ಪ್ರಾಧಿಕಾರವು, ಸ್ಥಳೀಯ ಪ್ರಾಧಿಕಾರದ ಅಧಿಕಾರವ್ಯಾಪ್ತಿಯಲ್ಲಿ ಬರುವ ಪ್ರದೇಶದ ಬೀದಿ ವ್ಯಾಪಾರಿಗಳನ್ನು ಪ್ರತಿನಿಧಿಸುವ ಪಟ್ಟಣ ಮಾರಾಟ ಸಮಿತಿಯ ಸದಸ್ಯರುಗಳಿಗಾಗಿ ಚುನಾವಣೆ ನಡೆಸುವ ಅದರ ಉದ್ದೇಶವನ್ನು ಅಧಿಸೂಚನೆ ಮೂಲಕ ವ್ಯಕ್ತಪಡಿಸತಕ್ಕದ್ದು.

(3) ಸಹಕಾರ ಸಂಘಗಳ ಚುನಾವಣಾ ಪ್ರಾಧಿಕಾರವು ಪಟ್ಟಣ ಮಾರಾಟ ಸಮಿತಿಯ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶದ ಬೀದಿ ವ್ಯಾಪಾರಿಗಳನ್ನು ಪ್ರತಿನಿಧಿಸುವ ಆ ಸಮಿತಿಯ ಸದಸ್ಯರುಗಳ ಚುನಾವಣೆಯನ್ನು ನಡೆಸುವ ಉದ್ದೇಶಕ್ಕಾಗಿ ಚುನಾವಣಾಧಿಕಾರಿಯನ್ನು ನೇಮಿಸತಕ್ಕದ್ದು.

(4) ಕರ್ನಾಟಕದ ಸಹಕಾರ ಸಂಘಗಳ ಚುನಾವಣಾ ಪ್ರಾಧಿಕಾರವು, ಚುನಾವಣೆಗಳನ್ನು ನಡೆಸುವುದಕ್ಕಾಗಿ, ಆದೇಶದ ಮೂಲಕ ದಿನಾಂಕ, ಸಮಯ ಹಾಗೂ ಸ್ಥಳವನ್ನು ನಿರ್ಧರಿಸತಕ್ಕದ್ದು.

(5) ಕರ್ನಾಟಕ ಸಹಕಾರ ಸಂಘಗಳ ಚುನಾವಣಾ ಪ್ರಾಧಿಕಾರದ ಆದೇಶ ಅಥವಾ ತೀರ್ಮಾನದ ನೋಟೀಸನ್ನು ಚುನಾವಣೆಯನ್ನು ನಡೆಸಲಾಗುವ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಪ್ರದೇಶದಲ್ಲಿ ಬೀದಿ ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವ ಬೀದಿ ವ್ಯಾಪಾರಿಗಳಿಗೆ, ಈ ಕೆಳಕಂಡ ಯಾವುದೇ ವಿಧಾನದ ಮೂಲಕ ಪರಿಚಲಾಯಿಸತಕ್ಕದ್ದು, ಎಂದರೆ.–

(ಎ) ಸಾರ್ವಜನಿಕ ನೋಟೀಸನ್ನು ಕನ್ನಡ ಅಥವಾ ಅಂತಹ ಇತರ ಭಾಷೆಯ ಎರಡು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಿಸುವುದು;

(ಬಿ) ಸ್ಥಳೀಯವಾಗಿ ತಲುಪಿಸುವುದು;

(ಸಿ) ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್ ಅಂಚೆಯ ಮೂಲಕ ರವಾನಿಸುವುದು;

(ಡಿ) ಸಕ್ಷಮ ಪ್ರಾಧಿಕಾರದಲ್ಲಿ ಸೂಕ್ತವಾಗಿ ನೋಂದಾಯಿತವಾದ ಸ್ಪೀಡ್ ಪೋಸ್ಟ್ ಅಥವಾ ಕೊರಿಯರ್ ಸೇವೆಗಳ ಮೂಲಕ ರವಾನಿಸುವುದು ಹಾಗೂ ಚುನಾವಣಾಧಿಕಾರಿಯವರ ಸೂಚನಾ ಫಲಕದಲ್ಲಿ ಪ್ರಕಟಿಸುವುದು; ಮತ್ತು ಅಂತಹ ನೋಟಿಸ್‌ನಲ್ಲಿ ಈ ಮುಂದಿನ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯು ಒಳಗೊಂಡಿರತಕ್ಕದ್ದು–

(i) ಪರಿಶಿಷ್ಟ ಜಾತಿ, ಪರಿಶಿಷ್ಠ ಪಂಗಡಗಳು, ಇತರ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಮಹಿಳೆಯರು, ಅಂಗವಿಕಲ ವ್ಯಕ್ತಿಗಳು ಅಥವಾ ಇತರ ಯಾವುದೇ ನಿರ್ದಿಷ್ಟಪಡಿಸಲಾದ ವರ್ಗಗಳನ್ನು ಪ್ರತಿನಿಧಿಸುವುದಕ್ಕಾಗಿ ಮೀಸಲಿಟ್ಟಿರುವ ಸ್ಥಾನಗಳನ್ನು ಒಳಗೊಂಡಂತೆ ಚುನಾಯಿಸಬೇಕಾದ ಸದಸ್ಯರುಗಳ ಸಂಖ್ಯೆ;

(ii) ನಾಮಪತ್ರಗಳನ್ನು ಸಲ್ಲಿಸಬೇಕಾದ ದಿನಾಂಕ, ಸ್ಥಳ ಹಾಗೂ ಸಮಯ; ಅಂತಹ ದಿನಾಂಕವು ಚುನಾವಣೆ ನಿಗದಿಮಾಡಿದ ದಿನಾಂಕಕ್ಕೆ ಮುಂಚಿನ ಏಳು ಪೂರ್ಣ ದಿನಗಳಿಗೆ ಕಡಿಮೆಯಿರದ ದಿನಾಂಕವಾಗಿರತಕ್ಕದ್ದು ಅಥವಾ ಆ ದಿನವು ಸಾರ್ವತ್ರಿಕ ರಜೆಯಾಗಿದ್ದಲ್ಲಿ ಆ ದಿನದ ಮಾರನೆಯ ಸಾರ್ವತ್ರಿಕ ರಜೆಯಲ್ಲದಿರುವ ದಿನವಾಗಿರತಕ್ಕದ್ದು.

**ವಿವರಣೆ.–**"ಸಾರ್ವತ್ರಿಕ ರಜೆ' ಎಂದರೆ, ವರ್ಗಾವಣೀಯ ಲಿಖಿತಗಳ ಅಧಿನಿಯಮ, (Negotiable Insturments Act) 1881 (ಕೇಂದ್ರ ಅಧಿನಿಯಮ ಸಂಖ್ಯೆ: 1881ರ XXVI)ರ 25ನೇ ಪ್ರಕರಣದ ಮೇರೆಗೆ ಸಾರ್ವತ್ರಿಕ ರಜೆಯಾಗಿರುವ ಯಾವುದೇ ದಿನ ಅಥವಾ ಸರ್ಕಾರದ ಅಧೀನದಲ್ಲಿರುವ ಕಛೇರಿಗಳಿಗಾಗಿ ಸಾರ್ವತ್ರಿಕ ರಜೆಯೆಂದು ಸರ್ಕಾರವು ಅಧಿಸೂಚಿಸಲಾಗಿರುವ ಯಾವುದೇ ದಿನ;

(iii) ನಾಮಪತ್ರಗಳ ಪರಿಶೀಲನಾ ದಿನಾಂಕ ಮತ್ತು ಸಮಯ;

(iv) ಮತದಾನದ ದಿನಾಂಕ, ಸ್ಥಳ ಹಾಗೂ ಸಮಯ.

(6) 6ನೇ ನಿಯಮದ (2)ನೇ ಉಪ–ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ ಸ್ಥಳೀಯ ಪ್ರಾಧಿಕಾರವು ಕರ್ನಾಟಕ ಸಹಕಾರ ಸಂಘಗಳ ಚುನಾವಣಾ ಪ್ರಾಧಿಕಾರಕ್ಕೆ, ಮತದಾರರ ಪಟ್ಟಿಯನ್ನು ಒದಗಿಸತಕ್ಕದ್ದು.

(7) ಚುನಾವಣೆಗಾಗಿ ಅಭ್ಯರ್ಥಿಗಳ ನಾಮಪತ್ರಗಳನ್ನು ಈ ಅನುಸೂಚಿಗೆ ಅನುಬಂಧಿಸಿರುವ ನಮೂನೆ–1ರಲ್ಲಿ ಸಲ್ಲಿಸತಕ್ಕದ್ದು. ಇದನ್ನು ಚುನಾವಣಾಕಾರಿಯು ಯಾರೇ ಬೀದಿ ವ್ಯಾಪಾರಿಗೆ ಉಚಿತವಾಗಿ ಒದಗಿಸತಕ್ಕದ್ದು.

(8) ಅಭ್ಯರ್ಥಿಯು, ನಾಮಪತ್ರಗಳೊಂದಿಗೆ ನಗದು ಅಥವಾ ಬ್ಯಾಂಕ್‌ಡ್ರಾಫ್ಟ್ ಅಥವಾ ಪೇ ಆರ್ಡರ್ ರೂಪದಲ್ಲಿ ಎರಡು ಸಾವಿರ ರೂಪಾಯಿಗಳ ಭದ್ರತಾ ಠೇವಣಿಯನ್ನು ಒದಗಿಸತಕ್ಕದ್ದು. ಅಭ್ಯರ್ಥಿಯು, ಮತದಾನವಾದ

ಮತಗಳಲ್ಲಿ ಆರನೇ ಒಂದರಷ್ಟಕ್ಕಿಂತ (1/6) ಹೆಚ್ಚು ಮತಗಳನ್ನು ಪಡೆಯುವಲ್ಲಿ ವಿಫಲನಾದರೆ, ಭದ್ರತಾ ಠೇವಣಿಯನ್ನು ಸ್ಥಳೀಯ ಪ್ರಾಧಿಕಾರವು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

(9) ಪ್ರತಿಯೊಂದು ನಾಮಪತ್ರವನ್ನು ಅಭ್ಯರ್ಥಿಯು ಖುದ್ದಾಗಿ ಅಥವಾ ತನ್ನ ಸೂಚಕ ಅಥವಾ ಅನುಮೋದಕನ ಮೂಲಕ ಚುನಾವಣಾಧಿಕಾರಿಗೆ ಸಲ್ಲಿಸತಕ್ಕದ್ದು. ಚುನಾವಣಾಧಿಕಾರಿಯು ನಾಮಪತ್ರದ ಮೇಲೆ ಅವರ ಕ್ರಮಸಂಖ್ಯೆಯನ್ನು ನಮೂದಿಸತಕ್ಕದ್ದು ಹಾಗೂ ತಾನು ನಾಮಪತ್ರವನ್ನು ಸ್ವೀಕರಿಸಿದ ದಿನಾಂಕ ಹಾಗೂ ಸಮಯವನ್ನು ಪ್ರಮಾಣೀಕರಿಸತಕ್ಕದ್ದು ಮತ್ತು ನಾಮಪತ್ರವನ್ನು ಸ್ವೀಕರಿಸಿದ್ದಕ್ಕಾಗಿ ಕೂಡಲೇ ಲಿಖಿತ ಸ್ವೀಕೃತಿಯನ್ನು ನೀಡತಕ್ಕದ್ದು, ಇದರಲ್ಲಿ ಪಟ್ಟಣ ಮಾರಾಟ ಸಮಿತಿಯ ಅಥವಾ ಚುನಾವಣಾಧಿಕಾರಿಯ ಮುದ್ರೆಯನ್ನು ಹಾಕಿರತಕ್ಕದ್ದು. ಯಾವುದೇ ನಾಮಪತ್ರವನ್ನು, ಅದನ್ನು ಸ್ವೀಕರಿಸುವುದಕ್ಕಾಗಿ ನಿಗದಿಪಡಿಸಲಾದ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಮತ್ತು ನಿಗಧಿತ ಸಮಯದೊಳಗೆ ಸಲ್ಲಿಸಿಲ್ಲದಿದ್ದರೆ ಅದನ್ನು ತಿರಸ್ಕರಿಸತಕ್ಕದ್ದು.

(10) (i) ನಾಮಪತ್ರಗಳನ್ನು ಸ್ವೀಕರಿಸುವುದಕ್ಕಾಗಿ ನಿಗದಿಪಡಿಸಲಾದ ದಿನಾಂಕದ ಮಾರನೆಯ ದಿನದಂದು ಚುನಾವಣಾಧಿಕಾರಿಯು ನಾಮಪತ್ರಗಳ ಪರಿಶೀಲನೆಯನ್ನು ಕೈಗೆತ್ತಿಕೊಳ್ಳತಕ್ಕದ್ದು.

(ii) ಚುನಾವಣಾಧಿಕಾರಿಯು ನಾಮಪತ್ರಗಳನ್ನು ಪರಿಶೀಲಿಸತಕ್ಕದ್ದು ಹಾಗೂ ಯಾವುದೇ ನಾಮಪತ್ರದ ಸಂಬಂಧದಲ್ಲಿ ಯಾರೇ ವ್ಯಕ್ತಿಯು ಮಾಡಿದ ಆಕ್ಷೇಪಣೆಗಳನ್ನು ತೀರ್ಮಾನಿಸತಕ್ಕದ್ದು ಹಾಗೂ ಅಂತಹ ಆಕ್ಷೇಪಣೆಯಿಂದಾಗಲಿ ಅಥವಾ ಸ್ವಯಂ ಪ್ರೇರಣೆಯಿಂದಾಗಲಿ ಮತ್ತು ಚುನಾವಣಾಧಿಕಾರಿಯು ಅವಶ್ಯಕವೆಂದು ಭಾವಿಸಿದಂಥ ಸಂಕ್ಷಿಪ್ತ ವಿಚಾರಣೆ ಏನಾದರೂ ಇದ್ದಲ್ಲಿ, ಅಂತಹ ವಿಚಾರಣೆಯ ನಂತರ ಯಾವುದೇ ನಾಮಪತ್ರವನ್ನು ತಿರಸ್ಕರಿಸಬಹುದು:

ಪರಂತು, ಸಂದರ್ಭಾನುಸಾರ, ಅಭ್ಯರ್ಥಿ, ಆತನ ಸೂಚಕ ಅಥವಾ ಅನುಮೋದಕನ ಗುರುತನ್ನು ಸಂದೇಹಕ್ಕೆ ಆಸ್ಪದವಿಲ್ಲದಂತೆ ಸಾಬೀತುಪಡಿಸಿದ್ದಲ್ಲಿ, 6ನೇ ಪ್ಯಾರಾದಲ್ಲಿ ಹೇಳಿರುವ ಬೀದಿ ವ್ಯಾಪಾರಿಗಳ ಪಟ್ಟಿಯಲ್ಲಿ ನಮೂದಿಸಲಾದಂತೆ ಅಭ್ಯರ್ಥಿಯ ಅಥವಾ ಆತನ ಸೂಚಕನ ಅಥವಾ ಅನುಮೋದಕನ ಹೆಸರಿನ ಅಸಮರ್ಪಕ ವಿವರಣೆಯ ಆಧಾರದ ಮೇಲೆ ಅಥವಾ ಅಭ್ಯರ್ಥಿಗೆ ಅಥವಾ ಆತನ ಸೂಚಕನಿಗೆ ಅಥವಾ ಅನುಮೋದಕನಿಗೆ ಸಂಬಂಧಿಸಿದ ಯಾವುದೇ ಇತರೇ ವಿವರಗಳಲ್ಲಿನ ತಪ್ಪು ವಿವರಣೆಯ ಕಾರಣದ ಮೇಲೆ ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸತಕ್ಕದ್ದಲ್ಲ.

(iii) ಸಂದರ್ಭಾನುಸಾರ, ಸ್ಪರ್ಧಿಸುತ್ತಿರುವ ಅಭ್ಯರ್ಥಿ ಅಥವಾ ಸೂಚಕ ಅಥವಾ ಅನುಮೋದಕನು, ನಾಮಪತ್ರಗಳನ್ನು ಪರೀಕ್ಷಿಸಿ, ಸ್ಪರ್ಧಿಸುತ್ತಿರುವ ಅಭ್ಯರ್ಥಿಯ ಹೆಸರಿನ ಸೇರ್ಪಡೆಯು ಸಿಂಧುವಾಗಿದೆ

ಎಂದು ಸ್ವತಃ ಮನವರಿಕೆ ಮಾಡಿಕೊಳ್ಳಲು ಚುನಾವಣಾಧಿಕಾರಿಯು ಎಲ್ಲಾ ಯುಕ್ತ ಸೌಲಭ್ಯಗಳನ್ನು ಕಲ್ಪಿಸತಕ್ಕದ್ದು.

(iv) ಚುನಾವಣಾಧಿಕಾರಿಯು, ಪ್ರತಿಯೊಂದು ನಾಮಪತ್ರದ ಮೇಲೆ, ಸಂದರ್ಭಾನುಸಾರ ಅದನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ತನ್ನ ನಿರ್ಣಯದ ಹಿಂಬರಹವನ್ನು ದಾಖಲಿಸತಕ್ಕದ್ದು ಮತ್ತು ನಾಮಪತ್ರವವನ್ನು ತಿರಸ್ಕರಿಸಿದರೆ, ಅಂತಹ ತಿರಸ್ಕರಣೆಗೆ ತನ್ನ ಕಾರಣಗಳ ಸಂಕ್ಷಿಪ್ತ ಹೇಳಿಕೆಯನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

(v) ಚುನಾವಣಾಧಿಕಾರಿಯು, ಗಲಭೆ ಅಥವಾ ದಂಗೆ ಅಥವಾ ತನ್ನ ನಿಯಂತ್ರಣಕ್ಕೂ ಮೀರಿದ ಕಾರಣಗಳಿಂದ ವ್ಯವಹರಣೆಗಳಿಗೆ ತೊಂದರೆ ಅಥವಾ ಅಡ್ಡಿ ಉಂಟಾದಂತಹ ಸಂದರ್ಭಗಳನ್ನು ಹೊರತುಪಡಿಸಿ, ವ್ಯವಹರಣೆಗಳ ಮುಂದೂಡುವಿಕೆಗೆ ಅವಕಾಶ ಮಾಡಿಕೊಡತಕ್ಕದ್ದಲ್ಲ.

(11) ಚುನಾವಣಾಧಿಕಾರಿಯು ನಿರ್ಧರಿಸಿದಂತೆ ನಾಮಪತ್ರಗಳಲ್ಲಿ ನಮೂದಿಸಲಾದ ಅಭ್ಯರ್ಥಿಗಳ, ಕನ್ನಡ ವರ್ಣಮಾಲೆಯ ಕ್ರಮದಲ್ಲಿನ ಹೆಸರುಗಳು ಹಾಗೂ ವಿಳಾಸಗಳಿರುವ ಸಿಂಧುವಾದ ನಾಮಪತ್ರಗಳ ಪಟ್ಟಿಯನ್ನು, ನಾಮಪತ್ರಗಳ ಪರಿಶೀಲನೆ ಪೂರ್ಣಗೊಂಡ ದಿನದಂದೇ ಪ್ರದರ್ಶಿಸತಕ್ಕದ್ದು ಅಥವಾ ಪ್ರಕಟಿಸತಕ್ಕದ್ದು.

(12) ಯಾರೇ ಅಭ್ಯರ್ಥಿಯು, ತಾನು ನಾಮಪತ್ರವನ್ನು ಸಲ್ಲಿಸಿದ ನಂತರ ಯಾವುದೇ ಸಮಯದಲ್ಲಿ, ಆದರೆ ಸಿಂಧುವಾದ ನಾಮಪತ್ರಗಳನ್ನು ಪ್ರಕಟಿಸಿದ ದಿನದ ಮಾರನೆಯ ದಿನದಂದು ಸಂಜೆ 5:00 ಗಂಟೆಗಿಂತ ಮುಂಚೆ ಚುನಾವಣಾಧಿಕಾರಿಗೆ ತಾನು ಸಹಿ ಹಾಕಿದ ಲಿಖಿತ ನೋಟೀಸನ್ನು ಖುದ್ದಾಗಿ ಸಲ್ಲಿಸಿ, ತನ್ನ ಉಮೇದುವಾರಿಕೆಯನ್ನು ಹಿಂಪಡೆಯಬಹುದು ಹಾಗೂ ಅಭ್ಯರ್ಥಿಗಳು ಒಮ್ಮೆ ನೀಡಿದ ಉಮೇದುವಾರಿಕೆ ಹಿಂಪಡೆಯುವ ನೋಟೀಸು ಹಿಂಪಡೆಯಲು ಸಾಧ್ಯವಿಲ್ಲದ್ದಾಗಿರತಕ್ಕದ್ದು.

(13) ನಾಮಪತ್ರಗಳು ಸಿಂಧುವಾಗಿವೆ ಎಂದು ಘೋಷಿಸಲಾಗಿರುವ ಅಭ್ಯರ್ಥಿಗಳ ಸಂಖ್ಯೆಯು, ಚುನಾಯಿಸಬೇಕಾದ ಅಭ್ಯರ್ಥಿಗಳ ಸಂಖ್ಯೆಯನ್ನು ಮೀರದಿದ್ದರೆ, ಚುನಾವಣಾಧಿಕಾರಿಯು ಮೇಲಿನ 10ನೇ ಪ್ಯಾರಾದ ಮೇರೆಗೆ ಉಮೇದುವಾರಿಕೆಯನ್ನು ಹಿಂಪಡೆಯಲು ನಿಗದಿಪಡಿಸಲಾದ ದಿನ ಮುಕ್ತಾಯಗೊಂಡ ತರುವಾಯ, ಅಂಥ ಎಲ್ಲ ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಿಸತಕ್ಕದ್ದು ಹಾಗೂ ಪಟ್ಟಣ ಮಾರಾಟ ಸಮಿತಿಗೆ ಅವರು ಯುಕ್ತವಾಗಿ ಚುನಾಯಿತರಾಗಿದ್ದಾರೆಂದು ಘೋಷಿಸತಕ್ಕದ್ದು. ನಾಮಪತ್ರಗಳು ಸಿಂಧುವಾಗಿರುವ ಅಭ್ಯರ್ಥಿಗಳ ಸಂಖ್ಯೆಯು, ಚುನಾಯಿಸಬೇಕಾದ ಸಂಖ್ಯೆಯನ್ನು ಮೀರಿದ್ದರೆ, ಚುನಾವಣಾಧಿಕಾರಿಯು ಮತದಾನವನ್ನು ನಡೆಸುವುದಕ್ಕಾಗಿ ನಿಗದಿಪಡಿಸಲಾದ ದಿನಾಂಕದಂದು ಮತದಾನಕ್ಕೆ ವ್ಯವಸ್ಥೆ ಮಾಡತಕ್ಕದ್ದು. ಚುನಾವಣಾಧಿಕಾರಿಯು, ಮತದಾನವನ್ನು ನಡೆಸುವುದಕ್ಕಾಗಿ ಅಗತ್ಯವಿರುವಷ್ಟು ಸಂಖ್ಯೆಯ ಒಬ್ಬರು ಅಥವಾ ಅದಕ್ಕಿಂತ ಹೆಚ್ಚು ಮತಗಟ್ಟೆ

ಅಧಿಕಾರಿಗಳನ್ನು ನೇಮಕ ಮಾಡಬಹುದು. ಬಳಸಬೇಕಾದ ಮತಪತ್ರವು, ಈ ಅನುಸೂಚಿಗೆ ಅನುಬಂಧಿಸಿರುವ ನಮೂನೆ–II ರಲ್ಲಿ ನಿರ್ದಿಷ್ಟಪಡಿಸಲಾದಂತೆ ಇರತಕ್ಕದ್ದು.

(14) ಸ್ಥಳೀಯ ಪ್ರಾಧಿಕಾರವು, ಮತಪೆಟ್ಟಿಗೆಗಳನ್ನು, ಮತಪತ್ರಗಳನ್ನು, ಬೀದಿ ವ್ಯಾಪಾರಿಗಳ ಅಥವಾ ಮತದಾರರ ಪಟ್ಟಿಯ ಪ್ರತಿಯನ್ನು ಹಾಗೂ ಚುನಾವಣೆಯನ್ನು ನಡೆಸುವುದಕ್ಕೆ ಅವಶ್ಯಕವಾಗಿರುವಂತಹ ಇತರ ವಸ್ತುಗಳನ್ನು ಚುನಾವಣಾ ಕಚೇರಿಗೆ ಒದಗಿಸತಕ್ಕದ್ದು. ಮತಪೆಟ್ಟಿಗೆಯನ್ನು ಅದರೊಳಗೆ ಮತಪತ್ರಗಳನ್ನು ಸೇರಿಸುವಂತೆ, ಆದರೆ ಪೆಟ್ಟಿಗೆಗಳನ್ನು ಬೀಗ ತೆಗೆಯದೇ ಅದರಿಂದ ಮತ ಪತ್ರಗಳನ್ನು ಹೊರತೆಗೆಯಲು ಸಾಧ್ಯವಾಗದಂತೆ ಸಿದ್ಧಪಡಿಸತಕ್ಕದ್ದು. ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಯು, ಮತದಾನ ನಡೆಯುತ್ತಿರುವ ಮತಗಟ್ಟೆಯಲ್ಲಿ ಮತದಾರರನ್ನು ಗುರುತಿಸುವುದಕ್ಕೆ ಮತ್ತು ಮತಗಳು ದಾಖಲಾಗುವುದನ್ನು ಗಮನಿಸಲು ಆತನ ಪ್ರತಿನಿಧಿಯಾಗಿ ಒಬ್ಬ ಏಜೆಂಟನನ್ನು, ಚುನಾವಣಾಧಿಕಾರಿಗೆ ಪತ್ರವನ್ನು ನೀಡುವ ಮೂಲಕ ನೇಮಿಸಿಕೊಳ್ಳಬಹುದು ಹಾಗೂ ಅಂತಹ ಪತ್ರವು, ಈ ಅನುಸೂಚಿಗೆ ಅನುಬಂಧಿಸಿರುವ ನಮೂನೆ–III ರಲ್ಲಿ ಸಂಬಂಧಪಟ್ಟ ಏಜೆಂಟನ ಲಿಖಿತ ಸಮ್ಮತಿಯನ್ನು ಒಳಗೊಂಡಿರತಕ್ಕದ್ದು.

(15) ಚುನಾವಣೆಗಳನ್ನು ನಡೆಸಬೇಕಾಗಿರುವ ಸ್ಥಳದಲ್ಲಿ ಯಾರೇ ವ್ಯಕ್ತಿಯು ಮತ ಪ್ರಚಾರ ಮಾಡುವುದನ್ನು ನಿಷೇಧಿಸತಕ್ಕದ್ದು.

(16) ಚುನಾವಣಾಧಿಕಾರಿಯು, ಆ ಸ್ಥಳೀಯ ಪ್ರಾಧಿಕಾರ ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ಚುನಾವಣೆ ನಡೆಸುವ ಅವಶ್ಯಕತೆ ಇದೆ ಎಂದು ಭಾವಿಸಿದಲ್ಲಿ, ಅವರು ಆ ಸ್ಥಳೀಯ ಪ್ರಾಧಿಕಾರ ಪ್ರದೇಶದಲ್ಲಿ, ಅಗತ್ಯವಾದಷ್ಟು ಮತಗಟ್ಟೆ ಅಧ್ಯಕ್ಷಾಧಿಕಾರಿ (ಪ್ರಿಸೈಡಿಂಗ್ ಅಧಿಕಾರಿ) ಮತ್ತು ಇತರ ಮತಗಟ್ಟೆ ಸಿಬ್ಬಂದಿಯನ್ನು ನೇಮಕ ಮಾಡಬಹುದು.

(17) ಮತದಾನ ಪ್ರಾರಂಭವಾಗುವ ನಿಕಟ ಪೂರ್ವದಲ್ಲಿ ಚುನಾವಣಾಧಿಕಾರಿಯು ಅಥವಾ ಪ್ರಿಸೈಡಿಂಗ್ ಅಧಿಕಾರಿಯು ಆ ಸಮಯದಲ್ಲಿ ಹಾಜರಿರುವಂಥ ವ್ಯಕ್ತಿಗಳಿಗೆ ಖಾಲಿ ಮತ ಪೆಟ್ಟಿಗೆಯನ್ನು ತೋರಿಸತಕ್ಕದ್ದು ಮತ್ತು ನಂತರ ಅದನ್ನು ಲಾಕ್ ಮಾಡಿ ತಮ್ಮ ಮೊಹರನ್ನು ಹಾಕತಕ್ಕದ್ದು. ಅಭ್ಯರ್ಥಿಯು ಅಥವಾ ಆತನ ಏಜೆಂಟನು ಬಯಸಿದಲ್ಲಿ, ಅವರು ತಮ್ಮದೇ ಮುದ್ರೆಯನ್ನು ಸಹ ಹಾಕಬಹುದು.

(18) ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಇಚ್ಛಿಸುವ ಪ್ರತಿಯೊಬ್ಬ ಬೀದಿ ಬದಿ ವ್ಯಾಪಾರಿ ಅಥವಾ ಮತದಾರನಿಗೆ ಮತ ಪತ್ರದ ಮೇಲೆ ಅನುಕೂಲಕ್ಕೆ ಅನುಸಾರವಾಗಿ ಮುದ್ರಿತ, ಬೆರಳಚ್ಚಿನ ರೂಪದಲ್ಲಾಗಲೀ ಅಥವಾ ಸೈಕ್ಲೋಸ್ಟೈಲ್ಡ್ ರೂಪದಲ್ಲಾಗಲೀ ಮತಪತ್ರದ ಮೇಲೆ ಕನ್ನಡ ವರ್ಣಮಾಲೆಯ ಕ್ರಮದಲ್ಲಿ ವ್ಯವಸ್ಥಿತಗೊಳಿಸಲಾದ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಹೆಸರನ್ನು ಒಳಗೊಂಡಿರುವ ಮತಪತ್ರಗಳನ್ನು ಒದಗಿಸತಕ್ಕದ್ದು. ಮತಪತ್ರವು, ಪಟ್ಟಣ ಮಾರಾಟ ಸಮಿತಿಯ ಮೊಹರನ್ನು ಹಾಗೂ ಚುನಾವಣಾಧಿಕಾರಿಯ

ಸಹಿಯನ್ನು ಸಹ ಹೊಂದಿರತಕ್ಕದ್ದು ಹಾಗೂ ಮತದಾರನು ಮತಚಲಾಯಿಸಲು ಇಚ್ಛಿಸುವ ವ್ಯಕ್ತಿಗಳ ಹೆಸರಿನ ಮುಂದೆ 'x' ಗುರುತನ್ನು ಹಾಕುವುದಕ್ಕಾಗಿ ಹೆಚ್ಚಿನ ಒಂದು ಕಾಲಂನ್ನು ಒಳಗೊಂಡಿರತಕ್ಕದ್ದು.

(19) ಪ್ರತಿಯೊಂದು ಮತದಾನ ಕೇಂದ್ರವು ಹಾಗೂ ಒಂದು ಕೇಂದ್ರದಲ್ಲಿ ಒಂದಕ್ಕಿಂತ ಹೆಚ್ಚು ಮತಗಟ್ಟೆಗಳಿರುವಲ್ಲಿ, ಅಂಥ ಪ್ರತಿಯೊಂದು ಮತಗಟ್ಟೆಯು, ಬೀದಿ ವ್ಯಾಪಾರಿಗಳು ಅಥವಾ ಮತದಾರರು ತಮ್ಮ ಮತಗಳನ್ನು ಗೌಪ್ಯವಾಗಿ ಹಾಕುವುದಕ್ಕೆ ಪ್ರತ್ಯೇಕ ಕಂಪಾರ್ಟಮೆಂಟ್‌ನ್ನು ಒಳಗೊಂಡಿರತಕ್ಕದ್ದು.

(20) ಮತಗಟ್ಟೆ ಅಧಿಕಾರಿ (ಪೋಲಿಂಗ್ ಅಧಿಕಾರಿ) ಗೆ ಒದಗಿಸಲಾದ ಪಟ್ಟಿಯಲ್ಲಿ ನಮೂದಿಸಿರುವ ಅದೇ ವ್ಯಕ್ತಿಯೇ ಸಂಬಂಧಪಟ್ಟ ಬೀದಿ ವ್ಯಾಪಾರಿ ಅಥವಾ ಮತದಾರನೆಂದು ಆ ಪೋಲಿಂಗ್ ಅಧಿಕಾರಿಗೆ ಮನವರಿಕೆಯಾದ ಹೊರತು ಆ ಬೀದಿ ವ್ಯಾಪಾರಿ ಅಥವಾ ಮತದಾರನಿಗೆ ಮತಪತ್ರವನ್ನು ನೀಡತಕ್ಕದ್ದಲ್ಲ. ಅಂಥ ಮತಪತ್ರವನ್ನು ಪಡೆದ ಬೀದಿ ವ್ಯಾಪಾರಿಯು ಅಥವಾ ಮತದಾರನು, ಮತಹಾಕುವ ಉದ್ದೇಶಕ್ಕಾಗಿ ಮೀಸಲಿಡಲಾದ ಕಂಪಾರ್ಟ್‌ಮೆಂಟ್‌ಗೆ ಹೋಗತಕ್ಕದ್ದು ಹಾಗೂ ಸಂದರ್ಭಾನುಸಾರ ಅಭ್ಯರ್ಥಿಯ ಅಥವಾ ಅಭ್ಯರ್ಥಿಗಳ ಹೆಸರುಗಳ ಮುಂದೆ 'x' ಗುರುತನ್ನು ಒತ್ತುವ ಮೂಲಕ ತಾನು ಮತಚಲಾಯಿಸಲು ಇಚ್ಛಿಸುವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಮತ ಹಾಕತಕ್ಕದ್ದು ಮತ್ತು ಅತ್ಯಂತ ಗೌಪ್ಯವಾಗಿರುವಂತೆ ಮತಪತ್ರವನ್ನು ಹಾಕುವ ಉದ್ದೇಶಕ್ಕಾಗಿ ಇಡಲಾದ ಮತಪೆಟ್ಟಿಗೆಯಲ್ಲಿ ಮತಪತ್ರವನ್ನು ಹಾಕತಕ್ಕದ್ದು. ಬೀದಿ ವ್ಯಾಪಾರಿಯು ಅಥವಾ ಮತದಾರನು, ಕುರುಡನಾಗಿದ್ದರೆ, ದೈಹಿಕ ದುರ್ಬಲನಾಗಿದ್ದರೆ ಅಥವಾ ಅನಕ್ಷರತೆಯ ಕಾರಣದಿಂದ ಮತಪತ್ರದ ಮೇಲೆ 'x' ಗುರುತನ್ನು ಒತ್ತಲು ಅಸಮರ್ಥನಾಗಿದ್ದರೆ ಪೋಲಿಂಗ್ ಅಧಿಕಾರಿಯು ಅಥವಾ ಅಂತಹ ಪೋಲಿಂಗ್ ಅಧಿಕಾರಿಯನ್ನು ನೇಮಕ ಮಾಡಿಲ್ಲದಿದ್ದಲ್ಲಿ, ಚುನಾವಣಾಧಿಕಾರಿಯು, ಅವನು ಮತಹಾಕಲು ಇಚ್ಛಿಸಿರುವ ಅಭ್ಯರ್ಥಿಯನ್ನು ಅಥವಾ ಅಭ್ಯರ್ಥಿಗಳನ್ನು ಅವನಿಂದ ತಿಳಿದುಕೊಂಡು ಅವನ ಪರವಾಗಿ 'x' ಗುರುತನ್ನು ಒತ್ತಬೇಕು ಮತ್ತು ಮತಪತ್ರವನ್ನು ಮತಪೆಟ್ಟಿಗೆಯಲ್ಲಿ ಹಾಕತಕ್ಕದ್ದು.

(21) ಮತದಾನದ ಯಾವುದೇ ಹಂತದಲ್ಲಿ ಯಾವುದೇ ಗಲಭೆ ಅಥವಾ ದಂಗೆಯಿಂದಾಗಿ ಮತ ಚಲಾವಣೆ ಪ್ರಕ್ರಿಯೆಗಳಿಗೆ ತೊಂದರೆ ಅಥವಾ ಅಡಚಣೆ ಉಂಟಾದಲ್ಲಿ ಅಥವಾ ಅಂಥ ಚುನಾವಣೆಗಳಲ್ಲಿ ಯಾವುದೇ ಯುಕ್ತ ಕಾರಣಕ್ಕಾಗಿ ಮತದಾನ ನಡೆಸಲು ಸಾಧ್ಯವಾಗದಿದ್ದಲ್ಲಿ, ಚುನಾವಣಾಧಿಕಾರಿಯು ಮತದಾನವನ್ನು ನಿಲ್ಲಿಸುವುದಕ್ಕೆ ಅಧಿಕಾರವನ್ನು ಹೊಂದಿರತಕ್ಕದ್ದು ಹಾಗೂ ಪಟ್ಟಣ ಮಾರಾಟ ಸಮಿತಿಯ ನಡಾವಳಿ ಪುಸ್ತಕದಲ್ಲಿ ಅಂಥ ಕ್ರಮವನ್ನು ತೆಗೆದುಕೊಂಡಿರುವುದಕ್ಕಾಗಿನ ತನ್ನ ಕಾರಣಗಳನ್ನು ದಾಖಲಿಸತಕ್ಕದ್ದು.

(22) ಬೀದಿ ವ್ಯಾಪಾರಿಗೆ ಅಥವಾ ಮತದಾರನಿಗೆ ಮತದಾನಕ್ಕಾಗಿ ನಿಗದಿಪಡಿಸಲಾದ ಸಮಯದ ನಂತರ ಪ್ರವೇಶ ನೀಡತಕ್ಕದಲ್ಲ, ಆದರೆ ಮತದಾನದ ಸಮಯ ಮುಕ್ತಾಯಗೊಳ್ಳುವುದಕ್ಕಿಂತ ಮುಂಚೆ ಮತದಾರನು ಮತಪತ್ರವನ್ನು

ನೀಡುತ್ತಿರುವ ಆವರಣವನ್ನು ಪ್ರವೇಶಿಸಿದ್ದರೆ ಆತನಿಗೆ ಮತಪತ್ರವನ್ನು ನೀಡಿ, ಮತ ಹಾಕಲು ಅವಕಾಶ ಮಾಡಿಕೊಡತಕ್ಕದ್ದು.

(23) ಮತದಾನವು ಮುಕ್ತಾಯಗೊಂಡ ಕೂಡಲೇ ಮತಗಳ ಎಣಿಕೆಯನ್ನು ಮಾಡತಕ್ಕದ್ದು. ಅದು ಸಾಧ್ಯವಾಗದಿದ್ದಲ್ಲಿ, ಮತಪೆಟ್ಟಿಗೆಯನ್ನು ಚುನಾವಣಾಧಿಕಾರಿಯ ಅಥವಾ ಪ್ರಿಸೈಡಿಂಗ್ ಅಧಿಕಾರಿಯ ಮುದ್ರೆಯೊಂದಿಗೆ ಮತ್ತು ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ಅಥವಾ ಅವರ ಏಜೆಂಟರು ಇಚ್ಛಿಸಿದಲ್ಲಿ ಅವರ ಮುದ್ರೆಯೊಂದಿಗೆ ಮೊಹರು ಮಾಡತಕ್ಕದ್ದು ಮತ್ತು ಅದನ್ನು ಸುರಕ್ಷಿತ ಅಭಿರಕ್ಷೆಗಾಗಿ ಸ್ಥಳೀಯ ಪ್ರಾಧಿಕಾರದಲ್ಲಿ ಇಡತಕ್ಕದ್ದು. ನಂತರ ಚುನಾವಣಾಧಿಕಾರಿಯು ಮುಂದಿನ ಮತ ಎಣಿಕೆಯ ದಿನವನ್ನು ಪ್ರಕಟಿಸತಕ್ಕದ್ದು. ಮತಗಳನ್ನು ಚುನಾವಣಾಧಿಕಾರಿಯ ಮೇಲ್ವಿಚಾರಣೆಯಲ್ಲಿ ಎಣಿಸತಕ್ಕದ್ದು. ಪ್ರತಿಯೊಬ್ಬ ಅಭ್ಯರ್ಥಿಯು ಮತ್ತು ಅವನ ಅಧಿಕೃತ ಏಜೆಂಟನು, ಮತ ಎಣಿಕೆ ಸಮಯದಲ್ಲಿ ಹಾಜರಾಗುವುದಕ್ಕೆ ಹಕ್ಕನ್ನು ಹೊಂದಿರತಕ್ಕದ್ದು. ಆದರೆ, ಮತ ಎಣಿಕೆಯ ಸಮಯದಲ್ಲಿ ಯಾರೇ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಗೈರು ಹಾಜರಿಯಾದಲ್ಲಿ, ಅದರಿಂದ ಚುನಾವಣಾಧಿಕಾರಿಯು ಮಾಡುವ, ಮತ ಎಣಿಕೆ ಮಾಡುವ ಅಥವಾ ಫಲಿತಾಂಶಗಳ ಘೋಷಣೆಯು ದೋಷಪೂರಿತವಾಗತಕ್ಕದ್ದಲ್ಲ. ಮತ ಎಣಿಕೆಯು ಮುಕ್ತಾಯಗೊಂಡ ಕೂಡಲೇ ಚುನಾವಣಾಧಿಕಾರಿಯು ಪ್ರತಿಯೊಬ್ಬ ಅಭ್ಯರ್ಥಿಯು ಪಡೆದ ಮತಗಳ ಸಂಖ್ಯೆಯನ್ನು ಹಾಗೂ ಚುನಾವಣೆಗಳ ಫಲಿತಾಂಶವನ್ನು ಘೋಷಿಸತಕ್ಕದ್ದು.

(24) ಚುನಾವಣೆಗಳ ಫಲಿತಾಂಶವನ್ನು, ಪಟ್ಟಣ ಮಾರಾಟ ಸಮಿತಿಯ ನಡಾವಳಿ ಪುಸ್ತಕದಲ್ಲಿಯೂ ಸಹ ದಾಖಲಿಸತಕ್ಕದ್ದು ಹಾಗೂ ಚುನಾವಣಾಧಿಕಾರಿಯು ಅದನ್ನು ದೃಢೀಕರಿಸತಕ್ಕದು ಮತ್ತು ಕೂಡಲೇ ಪಟ್ಟಣ ಮಾರಾಟ ಸಮಿತಿಯ ಕಛೇರಿಯ ಸೂಚನಾ ಫಲಕದಲ್ಲಿಯೂ ಸಹ ಅದನ್ನು ಅಧಿಸೂಚಿಸತಕ್ಕದ್ದು.

(25) ಮತಗಳು ಸಮ–ಸಮನಾಗಿ ಬಂದ ಸಂದರ್ಭದಲ್ಲಿ ಚುನಾವಣಾಧಿಕಾರಿಯು ನಾಣ್ಯದಿಂದ ಟಾಸ್ ಹಾಕುವ ಮೂಲಕ ಚುನಾವಣಾ ಫಲಿತಾಂಶವನ್ನು ಘೋಷಿಸತಕ್ಕದ್ದು.

(26) ಮತಪತ್ರವನ್ನು ಚುನಾವಣಾಧಿಕಾರಿಯು ಈ ಕೆಳಕಂಡ ಪ್ರಕರಣಗಳಲ್ಲಿ ತಿರಸ್ಕರಿಸತಕ್ಕದ್ದು,–

(i) ಬೀದಿ ವ್ಯಾಪಾರಿಯ ಮತವನ್ನು ಗುರುತಿಸಬಹುದಾದ ಯಾವುದೇ ಗುರುತನ್ನು ಹೊಂದಿದ್ದರೆ;

(ii) ಪಟ್ಟಣ ಮಾರಾಟ ಸಮಿತಿಯ ಮೊಹರನ್ನು ಅಥವಾ ಚುನಾವಣಾಧಿಕಾರಿಯ ಸಹಿಯನ್ನು ಹೊಂದಿಲ್ಲದಿದ್ದರೆ;

(iii) ಅದರ ಮೇಲೆ ಮತವನ್ನು ಸೂಚಿಸಿರುವ ಗುರುತು, ಯಾವ ಅಭ್ಯರ್ಥಿಗೆ ಮತವನ್ನು ಹಾಕಲಾಗಿದೆ ಎಂಬ ಬಗ್ಗೆ ಸಂದೇಹ ಪಡುವ ರೀತಿಯಲ್ಲಿದ್ದರೆ;

(iv) ಅದು ಅಸಲಿ ಮತಪತ್ರವೆಂಬ ಗುರುತನ್ನು ಸಾಬೀತುಗೊಳಿಸಲಾಗದಂತೆ ಹಾನಿಗೊಳಗಾಗಿದ್ದರೆ ಅಥವಾ ವಿರೂಪಗೊಂಡಿದ್ದರೆ;

(27) ಚುನಾವಣಾ ಫಲಿತಾಂಶವನ್ನು ಪ್ರಕಟಿಸಿದ ತರುವಾಯ, ಫಲಿತಾಂಶವನ್ನು ಘೋಷಿಸಿದ ಮೂರು ದಿನಗಳೊಳಗಾಗಿ ಚುನಾವಣಾಧಿಕಾರಿಯು ಚುನಾವಣಾ ಫಲಿತಾಂಶವನ್ನು ಹಾಗೂ ಅದರ ಮೇಲಿನ ವರದಿಯನ್ನು ಪೌರಾಯುಕ್ತರಿಗೆ ಅಥವಾ ಸಂದರ್ಭಾನುಸಾರ ಮುಖ್ಯಾಧಿಕಾರಿಗೆ ಕಳುಹಿಸತಕ್ಕದ್ದು.

(28) ಚುನಾವಣಾ ಫಲಿತಾಂಶವನ್ನು ಘೋಷಿಸಿದ ತರುವಾಯ, ಚುನಾವಣಾಧಿಕಾರಿಯು ಪಟ್ಟಣ ಮಾರಾಟ ಸಮಿತಿ ಸದಸ್ಯರ ಚುನಾವಣೆಗೆ ಸಂಬಂಧಿಸಿದ ಮತಪತ್ರಗಳನ್ನು ಮತ್ತು ದಾಖಲೆಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿ, ಸ್ಥಳೀಯ ಪ್ರಾಧಿಕಾರಕ್ಕೆ ಹಸ್ತಾಂತರಿಸತಕ್ಕದ್ದು ಮತ್ತು ಅದನ್ನು ಸ್ಥಳೀಯ ಪ್ರಾಧಿಕಾರವು ಮುಂದಿನ ಚುನಾವಣೆಗಳ ಫಲಿತಾಂಶಗಳು ಲಭ್ಯವಾಗುವವರೆಗೂ ಸಂರಕ್ಷಿಸಿ ಇಟ್ಟಿರತಕ್ಕದ್ದು, ತದನಂತರ ಸ್ಥಳೀಯ ಪ್ರಾಧಿಕಾರವು ಅವುಗಳನ್ನು ನಾಶಗೊಳಿಸತಕ್ಕದ್ದು ಮತ್ತು ಚುನಾವಣೆಗಳ ದಾಖಲೆಗಳನ್ನು ಹಸ್ತಾಂತರಿಸಿದ ಮತ್ತು ಪಡೆದುಕೊಂಡ ಪ್ರತಿಯನ್ನು ತಮ್ಮ ವರದಿಯೊಂದಿಗೆ ಚುನಾವಣಾಧಿಕಾರಿಯು ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

**ನಮೂನೆ–I**

**(5ನೇ ನಿಯಮವನ್ನು ನೋಡಿ)**

**(ಅನುಸೂಚಿಯ7ನೇ ಖಂಡ)**

**ಪಟ್ಟಣ ಮಾರಾಟ ಸಮಿತಿ ಸದಸ್ಯರುಗಳ ಚುನಾವಣೆಗಾಗಿ ನಾಮಪತ್ರದ ನಮೂನೆ**

ಇವರಿಗೆ,
ಚುನಾವಣಾಧಿಕಾರಿ,
.................................
ಪಟ್ಟಣ ಮಾರಾಟ ಸಮಿತಿ,
.........................................,

ಮಾನ್ಯರೆ,

ಶ್ರೀ.......................................................................ರವರ ಪತ್ನಿ/ ಮಗ/ ಮಗಳು ಆದ...............................................ಎಂಬ ಹೆಸರಿನ ನಾನು, ಪಟ್ಟಣ ಮಾರಾಟ ಸಮಿತಿಯ ವ್ಯಾಪ್ತಿ ಪ್ರದೇಶದಲ್ಲಿನ ಬೀದಿ ವ್ಯಾಪಾರಿಯಾಗಿದ್ದು (ಮಾರಾಟ ನೋಂದಣಿ/ಪ್ರಮಾಣಪತ್ರ ಸಂಖ್ಯೆ. .......................................), ಶ್ರೀ...............................................ಇವರ ಪತ್ನಿ/ಪುತ್ರ/ಪುತ್ರಿ ................................ ಎಂಬ ಹೆಸರಿನ ಮತ್ತು ಸದರಿ ವ್ಯಾಪಾರ ಮಾರಾಟ ಸಮಿತಿಯ ಬೀದಿ ವ್ಯಾಪಾರಿಯಾಗಿರುವ (ಮಾರಾಟ ನೋಂದಣಿ/ ಪ್ರಮಾಣಪತ್ರ ಸಂಖ್ಯೆ............................) ಇವರನ್ನು ......................................ರಂದು ನಡೆಯುವ ಚುನಾವಣೆಗೆ ಸದರಿ ಸಮಿತಿಯ ಸದಸ್ಯ ಹುದ್ದೆಗೆ ಅಭ್ಯರ್ಥಿಯೆಂದು ಈ ಮೂಲಕ ಸೂಚಿಸುತ್ತೇನೆ.

ಸೂಚಕರ ಹೆಸರು ಮತ್ತು ಸಹಿ ...............................................

ಮಾರಾಟದನೋಂದಣಿ/ಪ್ರಮಾಣಪತ್ರದ ಸಂಖ್ಯೆ ..........................................

ಶ್ರೀ..........................................ರವರ ಪತ್ನಿ/ಮಗ/ಮಗಳುಆದ.................................ಎಂಬ ಹೆಸರಿನ ನಾನು(ಪಟ್ಟಣ ಮಾರಾಟ ಸಮಿತಿಯ ಮಾರಾಟ ನೋಂದಣಿ/ ಪ್ರಮಾಣ ಪತ್ರದ ಸಂಖ್ಯೆ.........................)ಈ ಮೂಲಕ ಮೇಲಿನ ಸೂಚನೆಯನ್ನು ಅನುಮೋದಿಸಿದ್ದೇನೆ.

ಅನುಮೋದಕರ ಹೆಸರು ಮತ್ತು ಸಹಿ..................................................

ಮಾರಾಟ ನೋಂದಣಿ / ಪ್ರಮಾಣ ಪತ್ರದ ಸಂಖ್ಯೆ ...............................................

**ಅಭ್ಯರ್ಥಿಯಿಂದ ಘೋಷಣೆ**

ಶ್ರೀ ..........................................ರವರ ಪತ್ನಿ/ಮಗ/ಮಗಳು ಆದ................................ ಎಂಬ ಹೆಸರಿನ ನಾನು (ಪಟ್ಟಣ ಮಾರಾಟ ಸಮಿತಿಯ ಮಾರಾಟ ನೋಂದಣಿ/ ಪ್ರಮಾಣ ಪತ್ರದ ಸಂಖ್ಯೆ ......................................) ..................................... ಪಟ್ಟಣ ಮಾರಾಟ ಸಮಿತಿಯ ಸದಸ್ಯರ ಚುನಾವಣೆಗೆ ನನ್ನ ನಾಮಪತ್ರವನ್ನು ಸಲ್ಲಿಸಲು ಈ ಮೂಲಕ ಒಪ್ಪಿಕೊಂಡಿದ್ದೇನೆ.

ಮುಂದುವರಿದು –

(i) ನಾನು ಸದರಿ ಪಟ್ಟಣ ಮಾರಾಟ ಸಮಿತಿಯಲ್ಲಿ ಉದ್ಯೋಗಿಯಾಗಿರುವುದಿಲ್ಲ,

(ii) ನಾನು ಮತ ಚಲಾಯಿಸಲು ಅರ್ಹನಾಗಿದ್ದೇನೆ, ಮತ್ತು

(iii) ಬೀದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರದ ನಿಯಂತ್ರಣ) ಅಧಿನಿಯಮ, 2014 (ಕೇಂದ್ರಅಧಿನಿಯಮ ಸಂಖ್ಯೆ 2014ರ 7)ರ ಉಪಬಂಧಗಳ ಅಡಿಯಲ್ಲಿ ಮತ್ತು ಅದರ ಮೇರೆಗೆ ರಚಿಸಿದ.......................... ಬೀದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ) ನಿಯಮಗಳು, 2019 ರ ಅಡಿಯಲ್ಲಿ ಸದರಿ ಪಟ್ಟಣ ಮಾರಾಟ ಸಮಿತಿಯ ಸದಸ್ಯರ ಚುನಾವಣೆಗೆ ಸ್ಪರ್ಧಿಸಲು ನಾನು ಯಾವುದೇ ಅನರ್ಹತೆಗೆ ಒಳಗಾಗಿಲ್ಲವೆಂದು,
– ಘೋಷಿಸುತ್ತಿದ್ದೇನೆ.

ಅಭ್ಯರ್ಥಿಯ ಹೆಸರು ಮತ್ತು ಸಹಿ...........................................................

ಮಾರಾಟ ನೋಂದಣಿ/ ಪ್ರಮಾಣ ಪತ್ರದ ಸಂಖ್ಯೆ............................................

**(ಕಛೇರಿಯ ಉಪಯೋಗಕ್ಕಾಗಿ ಮಾತ್ರ)**

ನಾಮ ಪತ್ರದ ನಮೂನೆಯನ್ನು..................................................... (ಸಮಯ ಮತ್ತು ದಿನಾಂಕ) ಸ್ವೀಕರಿಸಲಾಗಿದೆ.

ಚುನಾವಣಾಧಿಕಾರಿಯ ಸಹಿ ........................................

ಮೊಹರು

**ಸ್ವೀಕೃತಿ**

ಚುನಾವಣೆಗಾಗಿ ಅಭ್ಯರ್ಥಿ/ಸೂಚಕ/ ಅನುಮೋದಕರಾದ ಶ್ರೀ/ಶ್ರೀಮತಿ/ಕುಮಾರಿ.................................................................. ಇವರು............................ ರಂದು ಪೂರ್ವಾಹ್ನ/ಅಪರಾಹ್ನ..............................ಸಮಯದಲ್ಲಿ ಸಲ್ಲಿಸಿದ ನಾಮಪತ್ರದ ನಮೂನೆಯನ್ನು ಸ್ವೀಕರಿಸಿದೆ.

ಚುನಾವಣಾಧಿಕಾರಿಯ ಸಹಿ ............................................

ಮೊಹರು

**ನಮೂನೆ II**

**(5ನೇ ನಿಯಮ ನೋಡಿ)**
**(ಅನುಸೂಚಿಯ 13ನೇ ಖಂಡ)**

**ಪಟ್ಟಣ ಮಾರಾಟ ಸಮಿತಿಯ ಸದಸ್ಯರ ಚುನಾವಣೆಗಾಗಿ ಮತಪತ್ರ**

ಬೀದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರದ ನಿಯಂತ್ರಣ) ನಿಯಮಗಳ ಅಡಿಯಲ್ಲಿ ನಡೆಸಬೇಕಾದ ಪಟ್ಟಣ ಮಾರಾಟ ಸಮಿತಿಯ ಸದಸ್ಯರುಗಳ ಚುನಾವಣೆಯ ಮತಪತ್ರ.

........................................................ ಪಟ್ಟಣ ಮಾರಾಟ ಸಮಿತಿ

..................................................

....................................................... (ವಿಳಾಸ)

(ಪಕ್ಕಾಪ್ರತಿ)

.................................. ಸ್ಥಾನಕ್ಕಾಗಿ ಮತಪತ್ರ

ಚುನಾವಣೆಯ ದಿನಾಂಕ ................................................

ಕ್ರಮ ಸಂಖ್ಯೆ .............................................ಮಾರಾಟ ನೋಂದಣಿ/ ಪ್ರಮಾಣ ಪತ್ರದ ಸಂಖ್ಯೆ.....................

ಮತಪತ್ರ ಸಂಖ್ಯೆ..............................................................

ದಯವಿಟ್ಟು ಯಾರೇ ಒಬ್ಬ ಅಭ್ಯರ್ಥಿ ಮುಂದೆ (x) ಗುರುತನ್ನು ಹಾಕಿ

| ಕ್ರ.ಸಂ | ಅಭ್ಯರ್ಥಿಯ ಹೆಸರು | ಮಾರಾಟನೋಂದಣಿ/ ಪ್ರಮಾಣಪತ್ರದ ಸಂಖ್ಯೆ | ಮತಚಲಾಯಿಸುವ(x)ಗುರುತು |
|---|---|---|---|
| | | | |
| | | | |

## ನಮೂನೆ– III
**(5ನೇ ನಿಯಮ ನೋಡಿ)**
**(ಅನುಸೂಚಿ 14ನೇ ಖಂಡ)**

### ಚುನಾವಣಾ ಏಜೆಂಟ್/ಎಣಿಕೆ ಏಜೆಂಟ್‌ನ ನೇಮಕಾತಿ ಪತ್ರ

ಶ್ರೀ..........................................ರವರ ಮಗ/ಪತ್ನಿ/ಮಗಳು ಆದ .......................................... ನಾನು, ಪಟ್ಟಣ ಮಾರಾಟ ಸಮಿತಿಯ ಅಧಿಕಾರ ವ್ಯಾಪ್ತಿಯುಳ್ಳ ಪ್ರದೇಶದಲ್ಲಿ ಬೀದಿ ವ್ಯಾಪಾರಿಯಾಗಿದ್ದು, (ಮಾರಾಟ ನೋಂದಣಿ/ ಪ್ರಮಾಣ ಪತ್ರದ ಸಂಖ್ಯೆ .....................................................)......................................... ರಂದು (ದಿನಾಂಕವನ್ನು ನಮೂದಿಸುವುದು) ನಡೆಯಲಿರುವ ಸದರಿ ಪಟ್ಟಣ ಮಾರಾಟ ಸಮಿತಿಯ ಸದಸ್ಯರ ಚುನಾವಣೆಗಾಗಿ ಸ್ಪರ್ಧಿಸುತ್ತಿದ್ದು, ಸದರಿ ಸಮಿತಿಯ ಸದಸ್ಯರುಗಳ ಚುನಾವಣೆಗೆ ನನ್ನ ಚುನಾವಣಾ ಏಜೆಂಟ್‌ನಾಗಿ/ಎಣಿಕೆಯ ಏಜೆಂಟ್‌ನಾಗಿ ಈ ಕೆಳಕಂಡ ವ್ಯಕ್ತಿಯನ್ನು ಈ ಮೂಲಕ ನಾಮನಿರ್ದೇಶಿಸಿದ್ದೇನೆ.

ಅಭ್ಯರ್ಥಿಯ ಹೆಸರು ಮತ್ತು ಸಹಿ .....................................................

ಮಾರಾಟ ನೋಂದಣಿ/ಪ್ರಮಾಣ ಪತ್ರದ ಸಂಖ್ಯೆ.............................................

ಶ್ರೀ.............................................ರವರ ಮಗ/ಪತ್ನಿ/ಮಗಳು ಆದ...........................................ನಾನು ................................................... (ವಿಳಾಸ)ಚುನಾವಣಾ ಏಜೆಂಟ್ /ಎಣಿಕೆಯ ಏಜೆಂಟ್‌ನಾಗಲು ಒಪ್ಪಿದ್ದೇನೆ.

ಏಜೆಂಟ್‌ನ ಸಹಿ

**ನಮೂನೆ–IV**

**(20ನೇ ನಿಯಮ ನೋಡಿ)**

**ಕುಂದುಕೊರತೆಗಳ ನಿವಾರಣಾ ಸಮಿತಿಗೆ ಬಾಧಿತನಾದ ಬೀದಿ ವ್ಯಾಪಾರಿಯಿಂದ ಅರ್ಜಿ**

**ಅರ್ಜಿ ಸಂಖ್ಯೆ .................. 20.................ರ**

**..................................................ಅರ್ಜಿದಾರ**
**ವಿರುದ್ಧ**
**................................................ ಪ್ರತಿವಾದಿ**

1. ಅರ್ಜಿದಾರನ ಹೆಸರು:
2. ಪತ್ರ ವ್ಯವಹಾರಕ್ಕಾಗಿ ವಿಳಾಸ:
3. ಸ್ಥಳೀಯ ಪ್ರಾಧಿಕಾರದಿಂದ ನೀಡಲಾದ(ನೀಡಿದ್ದಲ್ಲಿ)ಗುರುತಿನ ಚೀಟಿಯ ಸಂಖ್ಯೆ/ ಮಾರಾಟ ಪ್ರಮಾಣ ಪತ್ರದ ಸಂಖ್ಯೆ:
4. ವ್ಯಾಪಾರ ಮಾಡಲು ನೀಡಿದ ಪ್ರಮಾಣ ಪತ್ರದಸಂಖ್ಯೆ ಮತ್ತು ದಿನಾಂಕ:
5. ವ್ಯಾಪಾರದ ಸ್ಥಳ ಅಥವಾ ಜಾಗ:
6. ವ್ಯಾಪಾರದ ವಲಯ ಅಥವಾ ವಾರ್ಡ್:
7. ವ್ಯಾಪಾರದ ಸ್ವರೂಪ:
   (i) ಸಂಚಾರಿ ವ್ಯಾಪಾರಿ:
   (ii) ಸ್ಥಿರ ವ್ಯಾಪಾರಿ:
   (iii) ಯಾವುದೇ ಇತರೆ (ನಿರ್ದಿಷ್ಟ ಪಡಿಸುವುದು):
8. ಯಾವ ಪ್ರಾಧಿಕಾರದ ವಿರುದ್ಧ ದೂರು:
9. ಸಮಸ್ಯೆ ಕುರಿತಾದ ದೂರಿನ ವಿವರಗಳು (ಸಂಪೂರ್ಣ ವಿವರಗಳನ್ನು ನೀಡುವುದು):
10. ಸಮಸ್ಯೆ ಕುರಿತಾದ ದೂರಿಗೆ ಪೂರಕವಾದ ದಸ್ತಾವೇಜುಗಳು:

**ಘೋಷಣೆ:**

........................................ಎಂಬ ನಾನು ಅರ್ಜಿದಾರನಾಗಿದ್ದು, ಮೇಲೆ ಹೇಳಿದ ಅಂಶಗಳು ನನಗೆ ತಿಳಿದಿರುವಷ್ಟರ ಮಟ್ಟಿಗೆ ಮತ್ತು ನನಗೆ ಮಾಹಿತಿಯಿರುವಷ್ಟರ ಮಟ್ಟಿಗೆ ಸತ್ಯವಾಗಿವೆಯೆಂದು ಮತ್ತು ನಿಯಮಗಳಲ್ಲಿ ನಿಗದಿಪಡಿಸಿದ ಸಮಯದೊಳಗೆ ಈ ಅರ್ಜಿಯನ್ನು ಸಲ್ಲಿಸಿದ್ದೇನೆಂದು ಪ್ರಮಾಣ ಪೂರ್ವಕವಾಗಿ ಈ ಮೂಲಕ ಘೋಷಿಸುತ್ತೇನೆ.

ಸ್ಥಳ:

ದಿನಾಂಕ: ಅರ್ಜಿದಾರನ ಸಹಿ

**ಟಿಪ್ಪಣಿ:** ಈ ಅರ್ಜಿಯೊಂದಿಗೆ ಸಂಬಂಧಪಟ್ಟ ಎಲ್ಲಾ ದಸ್ತಾವೇಜುಗಳನ್ನು ಲಗತ್ತಿಸುವುದು. ಅಗತ್ಯವಿದ್ದರೆ, ಈ ಅರ್ಜಿಯೊಂದಿಗೆ ಲಗತ್ತಿಸಬಹುದಾದ ಪ್ರತ್ಯೇಕ ಪುಟಗಳಲ್ಲಿ ಸಮಸ್ಯೆ ಕುರಿತಾದ ದೂರಿನ ಪೂರ್ಣ ವಿವರಗಳನ್ನು ನೀಡುವುದು.

**ನಮೂನೆ–V**
**(23ನೇ ನಿಯಮ ನೋಡಿ)**
**ಪಟ್ಟಣ ಮಾರಾಟ ಸಮಿತಿಯ ತೀರ್ಮಾನದ ವಿರುದ್ಧ ಸ್ಥಳೀಯ ಪ್ರಾಧಿಕಾರಕ್ಕೆ ಮೇಲ್ಮನವಿ**

1. ಅರ್ಜಿದಾರನ ಹೆಸರು ಮತ್ತು ವಿಳಾಸ:
2. ನೋಂದಣಿ ಸಂಖ್ಯೆ/ ಮೊಕದ್ದಮೆ ಸಂಖ್ಯೆ /ಗುರುತು ಚೀಟಿಯ ಸಂಖ್ಯೆ:
3. ವ್ಯಾಪಾರದ ಸ್ಥಳ–
   (ಪ್ರದೇಶ, ವಲಯ, ವಾರ್ಡ್, ಮೊದಲಾದವುಗಳ ಪೂರ್ಣ ವಿವರಗಳನ್ನು ನೀಡಬೇಕು)
4. ವ್ಯಾಪಾರದ ಸ್ವರೂಪ–
   (ಸೂಕ್ತವಾಗಿರುವುದಕ್ಕೆ ಗುರುತು ಮಾಡಿ)
   (ಎ) ಸ್ಥಿರ ವ್ಯಾಪಾರಿ : (ಎ)
   (ಬಿ) ಸಂಚಾರಿ ವ್ಯಾಪಾರಿ : (ಬಿ)
   (ಸಿ) ಯಾವುದೇ ಇತರೆ ಪ್ರವರ್ಗ : (ಸಿ)
   (ಇತರೆ ಎಂದಾದರೆ, ದಯವಿಟ್ಟು ಪ್ರವರ್ಗವನ್ನು ನಿರ್ದಿಷ್ಟಪಡಿಸುವದು )
5. ವ್ಯಾಪಾರದ ಪ್ರಮಾಣ ಪತ್ರವನ್ನು ನೀಡಿದ ದಿನಾಂಕ
   (ನೀಡಿದ್ದಲ್ಲಿ, ಮಾರಾಟ ಪ್ರಮಾಣ ಪತ್ರದ ಒಂದು ಪ್ರತಿಯನ್ನು
   ಲಗತ್ತಿಸಬೇಕು)
6. ಈ ಕೆಳಕಂಡ ಯಾವುದರ ವಿರುದ್ಧ ಮೇಲ್ಮನವಿ :
   (ಸೂಕ್ತವಾದದ್ದಕ್ಕೆ ಗುರುತು ಮಾಡಿ)
   (ಎ) ಮಾರಾಟ ಪ್ರಮಾಣ ಪತ್ರ ನೀಡಿಕೆ; :
   (ಬಿ) ಮಾರಾಟ ಪ್ರಮಾಣ ಪತ್ರದ ರದ್ದತಿ; ಅಥವಾ :
   (ಸಿ) ಮಾರಾಟ ಪ್ರಮಾಣ ಪತ್ರದ ಅಮಾನತು :
7. ಮೇಲ್ಮನವಿಗೆ ಕಾರಣಗಳು
   (ಸಂಪೂರ್ಣ ವಿವರಗಳನ್ನು ನೀಡುವುದು ಮತ್ತು ಅಗತ್ಯವಿದ್ದಲ್ಲಿ ಹೆಚ್ಚಿನ ಪುಟಗಳನ್ನು ಲಗತ್ತಿಸುವುದು)

ಮೇಲ್ಮನವಿದಾರನ ಸಹಿ

..............................

**ಘೋಷಣೆ**

............................................................ ಎಂಬ ನಾನು ಮೇಲ್ಮನವಿದಾರನಾಗಿದ್ದು, ಮೇಲೆ ಹೇಳಿದ ಅಂಶಗಳು ನನ್ನ ಉತ್ತಮ ತಿಳಿವಳಿಕೆ ಮಟ್ಟಿಗೆ ಮತ್ತು ನಂಬಿಕೆ ಮಟ್ಟಿಗೆ ಸತ್ಯವಾಗಿವೆ ಎಂದು ಪ್ರಮಾಣ ಪೂರ್ವಕವಾಗಿ ಈ ಮೂಲಕ ಘೋಷಿಸುತ್ತೇನೆ.

ಸ್ಥಳ:

ದಿನಾಂಕ: ಅಭ್ಯರ್ಥಿಯ ಸಹಿ

...............................

ಟಿಪ್ಪಣಿ.– ಈ ಅರ್ಜಿಯೊಂದಿಗೆ ಸಂಬಂಧಪಟ್ಟ ಎಲ್ಲಾ ದಸ್ತಾವೇಜುಗಳನ್ನು ದಯವಿಟ್ಟು ಲಗತ್ತಿಸುವುದು.

**ನಮೂನೆ–VI**

**(23ನೇ ನಿಯಮ ನೋಡಿ)**

**ಕುಂದುಕೊರತೆಗಳ ನಿವಾರಣಾ ಸಮಿತಿಯ ನಿರ್ಣಯದ ವಿರುದ್ಧ ಸ್ಥಳೀಯ ಪ್ರಾಧಿಕಾರಕ್ಕೆ ಬಾಧಿತ ಬೀದಿ ವ್ಯಾಪಾರಿಯಿಂದ ಮೇಲ್ಮನವಿ**

**ಮೇಲ್ಮನವಿ ಸಂಖ್ಯೆ 20..................ರ...................**

**...................................................ಮೇಲ್ಮನವಿದಾರ**

**ವಿರುದ್ಧ**

**.................................................. ಪ್ರತಿವಾದಿ**

1. ಮೇಲ್ಮನವಿದಾರನ ಹೆಸರು:
2. ಪತ್ರ ವ್ಯವಹಾರಕ್ಕಾಗಿ ವಿಳಾಸ:
3. ಸ್ಥಳೀಯ ಪ್ರಾಧಿಕಾರದಿಂದ ನೀಡಲಾದ(ನೀಡಿದ್ದಲ್ಲಿ)ಗುರುತಿನ ಚೀಟಿಯ ಸಂಖ್ಯೆ/ ಮಾರಾಟ ಪ್ರಮಾಣ ಪತ್ರದ ಸಂಖ್ಯೆ:
4. ಮಾರಾಟ ಪ್ರಮಾಣ ಪತ್ರದ ಸಂಖ್ಯೆ ಮತ್ತು ನೀಡಿದ ದಿನಾಂಕ:
5. ವ್ಯಾಪಾರದ ಸ್ಥಳ ಅಥವಾ ಜಾಗ:
6. ವ್ಯಾಪಾರದ ವಲಯ ಅಥವಾ ವಾರ್ಡ್:
7. ವ್ಯಾಪಾರದ ಸ್ವರೂಪ:

   (i) ಸಂಚಾರಿ ವ್ಯಾಪಾರ:

   (ii) ಸ್ಥಿರ ವ್ಯಾಪಾರ:

   (iii) ಯಾವುದೇ ಇತರೆ (ನಿರ್ದಿಷ್ಟ ಪಡಿಸುವುದು)
8. ಯಾವುದರ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿದೆಯೋ ಅದರ ಕುರಿತು ಕುಂದು ಕೊರತೆಗಳ ನಿವಾರಣಾ ಸಮಿತಿಯ ನಿರ್ಣಯ:
9. ಮೇಲ್ಮನವಿಯ ವಿವರಗಳು ಮತ್ತು ಕಾರಣಗಳು (ಪೂರ್ಣ ವಿವರಗಳನ್ನು ನೀಡುವುದು)
10. ಮೇಲ್ಮನವಿಗೆ ಪೂರಕವಾದ ದಸ್ತಾವೇಜುಗಳು:

**ಘೋಷಣೆ**

..............................................ಎಂಬ ನಾನು ಅರ್ಜಿದಾರನಾಗಿದ್ದು, ಮೇಲೆ ಹೇಳಿದ ಅಂಶಗಳು ನನಗೆ ತಿಳಿದಿರುವಷ್ಟರ ಮಟ್ಟಿಗೆ ಮತ್ತು ಮಾಹಿತಿಯಿರುವಷ್ಟರ ಮಟ್ಟಿಗೆ ಸತ್ಯವಾಗಿವೆಯೆಂದು ಮತ್ತು ನಿಯಮಗಳಲ್ಲಿ ನಿಗದಿಪಡಿಸಿದ ಸಮಯದೊಳಗೆ ಈ ಮೇಲ್ಮನವಿಯನ್ನು ಸಲ್ಲಿಸಿದ್ದೇನೆಂದು ಪ್ರಮಾಣಪೂರ್ವಕವಾಗಿ ಈ ಮೂಲಕ ಘೋಷಿಸುತ್ತೇನೆ.

ಸ್ಥಳ: ಮೇಲ್ಮನವಿದಾರನ ಸಹಿ

ದಿನಾಂಕ:

ಟಿಪ್ಪಣಿ: ಈ ಮೇಲ್ಮನವಿಯೊಂದಿಗೆ ಕುಂದುಕೊರತೆಗಳ ನಿವಾರಣಾ ಸಮಿತಿಯ ಆದೇಶವನ್ನು ಒಳಗೊಂಡಂತೆ ಸಂಬಂಧಪಟ್ಟ ಎಲ್ಲಾ ದಸ್ತಾವೇಜುಗಳನ್ನು ಲಗತ್ತಿಸುವುದು. ಅಗತ್ಯವಿದ್ದಲ್ಲಿ, ಈ ಮೇಲ್ಮನವಿಯೊಂದಿಗೆ ಲಗತ್ತಿಸಬಹುದಾದ ಪ್ರತ್ಯೇಕ ಪುಟಗಳಲ್ಲಿ ಮೇಲ್ಮನವಿಯ ಪೂರ್ಣ ಕಾರಣಗಳನ್ನು ನೀಡುವುದು.

## ನಮೂನೆ–VII

### (27ನೇ ನಿಯಮ ನೋಡಿ)

### ರಾಜ್ಯ ಸರ್ಕಾರಕ್ಕೆ ಆನ್‌ಲೈನ್ ಮೂಲಕ ಒದಗಿಸಬೇಕಾದ ನಿಯತಕಾಲಿಕ ವಿವರ ಪಟ್ಟಿಗಳ ವಿವರಗಳು

....................................(ನಗರಪಾಲಿಕೆ ಅಥವಾ ನಗರಸಭೆ ಅಥವಾ ಪುರಸಭೆ ಅಥವಾ ಪಟ್ಟಣ ಪಂಚಾಯತಿ ಅಥವಾ ದಂಡು ಪ್ರದೇಶಮಂಡಳಿ)ಯು 20.........ರ..............................(ಮಾರ್ಚ್, ಜೂನ್, ಸೆಪ್ಟೆಂಬರ್ ಅಥವಾ ಡಿಸೆಂಬರ್) ತಿಂಗಳಿಗೆ ಮುಕ್ತಾಯವಾಗುವ ತ್ರೈಮಾಸಿಕ ನಿಯತಕಾಲಿಕ ಪಟ್ಟಿಗಳ ವಿವರಗಳನ್ನು ಈ ಮುಂದಿನ ವಿವರಗಳನ್ನು ಈ ಮೂಲಕ ಸಲ್ಲಿಸಿದೆ.

1. ತ್ರೈಮಾಸಿಕ ಅವಧಿಯಲ್ಲಿ ನೀಡಿದ, ತಿರಸ್ಕೃತಗೊಂಡ, ತಡೆಹಿಡಿಯಲಾದ ಮತ್ತು ರದ್ದುಗೊಳಿಸಿದ ಪ್ರಮಾಣ ಪತ್ರಗಳ ವಿವರಗಳು

| ವಿವರಗಳು | ಅರ್ಜಿಗಳು | ಅಂಗೀಕರಿಸಿದ್ದು ಅಥವಾ ನೀಡಿದ್ದು | ತಿರಸ್ಕೃತಗೊಂಡ | ನವೀಕರಿಸಿದ್ದು | ತಡೆಹಿಡಿಯಲಾದದ್ದು | ರದ್ದುಗೊಳಿಸಿದ್ದು |
|---|---|---|---|---|---|---|
| ತ್ರೈಮಾಸಿಕ ಅವಧಿಯ ಪ್ರಾರಂಭದಲ್ಲಿ ಇದ್ದಂತೆ ಬಾಕಿ | | | | | | |
| ಹೊಸದಾಗಿ ಸ್ವೀಕರಿಸಲಾದವುಗಳು | | | | | | |
| ಒಟ್ಟು | | | | | | |
| ತ್ರೈಮಾಸಿಕ ಅವಧಿಯಲ್ಲಿ ವಿಲೆ ಮಾಡಿದ್ದು | | | | | | |
| ತ್ರೈಮಾಸಿಕ ಅವಧಿಯ ಕೊನೆಯಲ್ಲಿ ಇದ್ದಂತೆ ಬಾಕಿ | | | | | | |

2. ಹೊಸದಾಗಿ ಸಮೀಕ್ಷೆ ಮಾಡಲಾದ ಬೀದಿ ವ್ಯಾಪಾರಿಗಳ ಸಂಖ್ಯೆ ಮತ್ತು ಬೀದಿ ವ್ಯಾಪಾರಿಯ ಹೆಸರು, ವಿಳಾಸ, ವ್ಯಾಪಾರದ ಸ್ಥಳ, ವ್ಯಾಪಾರದ ರೀತಿ, ಇತ್ಯಾದಿಗಳನ್ನು ಒಳಗೊಂಡಂತೆ ಅವರ ಸಂಪೂರ್ಣ ವಿವರಗಳು.
3. ಪಟ್ಟಣ ಮಾರಾಟ ಸಮಿತಿಯು ನಡೆಸಲಾದ ಸಭೆಗಳ ಸಂಖ್ಯೆ
4. ಹೊಸದಾಗಿ ವ್ಯಾಪಾರಕ್ಕೆ ಮೀಸಲಿಟ್ಟ ಪ್ರದೇಶ, ಯಾವುದಾದರೂ ಇದ್ದಲ್ಲಿ, ಅದರ ಧಾರಣಾ ಸಾಮರ್ಥ್ಯದ ವಿವರಗಳು.
5. ಸಾಮಾಜಿಕ ಲೆಕ್ಕ ಪರಿಶೋಧನೆ ಮಾಡಿದ್ದೇನಾದರೂ ಇದ್ದರೆ, ಅದರ ವಿವರಗಳು.

6. ಬೀದಿ ವ್ಯಾಪಾರಿಗಳಿಗಾಗಿ ಸಾಲ ಸೌಲಭ್ಯ, ವಿಮೆ ಮತ್ತು ಸಾಮಾಜಿಕ ಭದ್ರತೆಯ ಇತರೆ ಕಲ್ಯಾಣ ಯೋಜನೆಗಳಿಗಾಗಿ ತೆಗೆದುಕೊಂಡ ಉತ್ತೇಜನಾತ್ಮಕ ಕ್ರಮಗಳ ವಿವರಗಳು.
7. ರಾಜ್ಯ ಸರ್ಕಾರವು ಕಾಲಕಾಲಕ್ಕೆ ಸೂಚಿಸಿದ ಯಾವುದೇ ಇತರೆ ಮಾಹಿತಿ.

**(I) ಸಮೀಕ್ಷೆ–**

(ಎ) ಸಮೀಕ್ಷೆ ಮಾಡಿದ ಅವಧಿಯಲ್ಲಿ ಬೀದಿ ವ್ಯಾಪಾರಿಗಳ ಸಂಖ್ಯೆ;

(ಬಿ) ಸಮೀಕ್ಷೆ ಪೂರ್ಣಗೊಂಡ ದಿನಾಂಕದೊಂದಿಗೆ, ಸಮೀಕ್ಷೆ ಕಾರ್ಯಪೂರ್ಣಗೊಳಿಸಿದ ಪ್ರದೇಶ ಮತ್ತು ವಾರ್ಡ್‌ಗಳ ಹೆಸರು;

(ಸಿ) ಸಮೀಕ್ಷೆ ಪ್ರಾರಂಭಿಸಿದ ದಿನಾಂಕ ಮತ್ತು ಪೂರ್ಣಗೊಳ್ಳುವ ಸಂಭವನೀಯ ದಿನಾಂಕದೊಂದಿಗೆ, ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿರುವ ಪ್ರದೇಶ ಮತ್ತು ವಾರ್ಡ್‌ಗಳ ಹೆಸರು;

(ಡಿ) ವರ್ಷದ ಕೊನೆಯ ದಿನದಂದು ಇದ್ದಂತೆ ವಾರ್ಡ್‌ವಾರು ನೋಂದಾಯಿತ ಬೀದಿ ವ್ಯಾಪಾರಿಗಳ ಸಂಖ್ಯೆ;

**(II) ಮಾರಾಟ ಪ್ರಮಾಣ ಪತ್ರವನ್ನು ನೀಡುವುದಕ್ಕಾಗಿ ಅರ್ಜಿಗಳ ಸ್ವೀಕೃತಿ ಮತ್ತು ವಿಲೆ–**

(ಎ) ವರ್ಷದ ಅವಧಿಯಲ್ಲಿ ಮಾರಾಟ ಪ್ರಮಾಣ ಪತ್ರವನ್ನು ನೀಡುವುದಕ್ಕಾಗಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ(ವಾರ್ಡ್‌ವಾರು);

(ಬಿ) ವರ್ಷದ ಅವಧಿಯಲ್ಲಿ ವಿಲೇ ಮಾಡಲಾದ ಅರ್ಜಿಗಳ ಸಂಖ್ಯೆ(ವಾರ್ಡ್‌ವಾರು)–

(i) ಅಂಗೀಕರಿಸಲಾದ ಅರ್ಜಿಗಳ ಸಂಖ್ಯೆ;

(ii) ನಿರಾಕರಿಸಿದ ಅರ್ಜಿಗಳ ಸಂಖ್ಯೆ;

(iii) ವರ್ಷದ ಕೊನೆಯ ದಿನದಂದು ಬಾಕಿಯಿರುವ ಅರ್ಜಿಗಳ ಸಂಖ್ಯೆ;

**(III) ಮಾರಾಟ ಪ್ರಮಾಣ ಪತ್ರವನ್ನು ತಡೆ ಹಿಡಿದಿರುವ ಪ್ರಕರಣಗಳು**

(ಎ) ವರ್ಷದ ಅವಧಿಯಲ್ಲಿ ಮಾರಾಟ ಪ್ರಮಾಣ ಪತ್ರವನ್ನು ತಡೆ ಹಿಡಿಯುವುದಕ್ಕಾಗಿ ಕ್ರಮ ಕೈಗೊಂಡ ಪ್ರಕರಣಗಳ ಸಂಖ್ಯೆ;

(ಬಿ) ವರ್ಷದ ಅವಧಿಯಲ್ಲಿ ವಿಲೆಯಾದ/ತಡೆ ಹಿಡಿದಿದ್ದ ಪ್ರಕರಣಗಳ ಸಂಖ್ಯೆ, ಆ ಪೈಕಿ,–

(i) ತಡೆಹಿಡಿದ ಮಾರಾಟ ಪ್ರಮಾಣ ಪತ್ರಗಳ ಸಂಖ್ಯೆ;

(ii) ಮುಕ್ತಾಯಗೊಳಿಸಿದ ಪ್ರಕರಣಗಳು ಹಾಗೂ ಮುಂದುವರಿಸಲಾದ ಮಾರಾಟ ಪ್ರಮಾಣ ಪತ್ರಗಳ ಸಂಖ್ಯೆ;

(iii) ವರ್ಷದ ಕೊನೆಯ ದಿನದಂದು ಇದ್ದಂತೆ ಇತ್ಯರ್ಥದಲ್ಲಿರುವ ಪ್ರಕರಣಗಳ ಸಂಖ್ಯೆ.

**(IV) ಮಾರಾಟ ಪ್ರಮಾಣ ಪತ್ರ ತಡೆ ಹಿಡಿದಿರುವುದನ್ನು ರದ್ದುಗೊಳಿಸುವುದಕ್ಕಾಗಿ ಬಂದ ಅರ್ಜಿಗಳು–**

(ಎ) ವರ್ಷದ ಅವಧಿಯಲ್ಲಿ ಮಾರಾಟ ಪ್ರಮಾಣ ಪತ್ರ ತಡೆ ಹಿಡಿದಿದ್ದನ್ನು ರದ್ದುಗೊಳಿಸುವುದಕ್ಕಾಗಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ;

(ಬಿ) ವರ್ಷದ ಅವಧಿಯಲ್ಲಿ ಮೇಲ್ಕಂಡ (ಎ) ನಂತೆ ಸ್ವೀಕರಿಸಿದ ಅರ್ಜಿಗಳ ಪೈಕಿ, ವಿಲೆ ಮಾಡಿದ ಅರ್ಜಿಗಳ ಸಂಖ್ಯೆ, ಎಂದರೆ,–

(i) ತಡೆ ಹಿಡಿದಿದ್ದನ್ನು ರದ್ದುಗೊಳಿಸಲಾದವುಗಳ ಮತ್ತು ಮಾರಾಟ ಪ್ರಮಾಣ ಪತ್ರವನ್ನು ಪುನಃ ಸಿಂಧುಗೊಳಿಸಲಾದ ಅರ್ಜಿಗಳ ಸಂಖ್ಯೆ;

(ii) ಮುಕ್ತಾಯಗೊಂಡ ಮತ್ತು ತಡೆ ಹಿಡಿದಿರುವುದನ್ನು ಮುಂದುವರಿಸಲಾದ ಪ್ರಕರಣಗಳ ಸಂಖ್ಯೆ;

(ಸಿ) ವರ್ಷದ ಕೊನೆಯ ದಿನಾಂಕದಂದು ಇದ್ದಂತೆ ತಡೆಹಿಡಿದಿರುವುದನ್ನು ರದ್ದುಗೊಳಿಸುವುದಕ್ಕಾಗಿ ಬಾಕಿಯಿರುವ ಪ್ರಕರಣಗಳ ಸಂಖ್ಯೆ;

**(V) ಮಾರಾಟ ಪ್ರಮಾಣ ಪತ್ರದ ರದ್ದತಿ ಪ್ರಕರಣಗಳು–**

(ಎ) ವರ್ಷದಅವಧಿಯಲ್ಲಿ ಮಾರಾಟ ಪ್ರಮಾಣ ಪತ್ರದ ರದ್ದತಿಗಾಗಿ ಕ್ರಮ ಕೈಗೊಳ್ಳಲಾದ ಪ್ರಕರಣಗಳ ಸಂಖ್ಯೆ;

(ಬಿ) ವರ್ಷದ ಅವಧಿಯಲ್ಲಿ ವಿಲೆ ಮಾಡಿದ ಮಾರಾಟ ಪ್ರಮಾಣ ಪತ್ರದ ರದ್ದತಿ ಪ್ರಕರಣಗಳ ಸಂಖ್ಯೆ ಆ ಪೈಕಿ, ಎಂದರೆ–

(i) ರದ್ದಾದ ಮಾರಾಟ ಪ್ರಮಾಣ ಪತ್ರಗಳ ಸಂಖ್ಯೆ;

(ii) ಮುಕ್ತಾಯಗೊಂಡ ಮತ್ತು ಮಾರಾಟ ಪ್ರಮಾಣ ಪತ್ರವನ್ನು ಮುಂದುವರೆಸಲಾದ ಪ್ರಕರಣಗಳ ಸಂಖ್ಯೆ;

(ಸಿ) ವರ್ಷದ ಕೊನೆಯ ದಿನಾಂಕದಂದು ಇತ್ಯರ್ಥದಲ್ಲಿರುವ ಪ್ರಕರಣಗಳ ಸಂಖ್ಯೆ;

**(VI)** ವರ್ಷದ ಅವಧಿಯಲ್ಲಿ ನಡೆಸಲಾದ ಪಟ್ಟಣ ಮಾರಾಟ ಸಮಿತಿಯ ಸಭೆಗಳ ಸಂಖ್ಯೆ;

**(VII)** ವಾರ್ಡ್, ಪ್ರದೇಶ/ಕಾಲೋನಿ,ರಸ್ತೆ, ಮಾರಾಟ ವಲಯದ ನಕ್ಷೆ ಮತ್ತು ಅದರ ಧಾರಣಾ ಸಾಮರ್ಥ್ಯ, ಮುಂತಾದ ವಿವರಣೆಗಳೊಂದಿಗೆ,ಗುರುತಿಸಲಾದ ವ್ಯಾಪಾರ ವಲಯಗಳ ವಾರ್ಡ್‌ವಾರು ಪಟ್ಟಿ

**(VIII)** ಅಧಿಸೂಚಿತ ವ್ಯಾಪಾರ ವಲಯಗಳಲ್ಲಿ ಸ್ಥಳಾವಕಾಶ ಕಲ್ಪಿಸಿರುವ ನೋಂದಾಯಿತ ಬೀದಿ ವ್ಯಾಪಾರಿಗಳ ವಾರ್ಡ್‌ವಾರು ಸಂಖ್ಯೆ;

**(IX) ಇತರೆ ಕಾರ್ಯಚಟುವಟಿಕೆಗಳು–(1)** (ಎ) ವರ್ಷದ ಅವಧಿಯಲ್ಲಿ ನಡೆಸಲಾದ ಅದರ ಕಾರ್ಯಚಟುವಟಿಕೆಗಳ ಸಾಮಾಜಿಕ ಲೆಕ್ಕ ಪರಿಶೋಧನೆ;

(ಬಿ) ವರ್ಷದ ಅವಧಿಯಲ್ಲಿ ಬೀದಿ ವ್ಯಾಪಾರಿಗಳ ಸಾಮಾಜಿಕ ಭದ್ರತೆಗಾಗಿ ಸಾಲ ಸೌಲಭ್ಯ, ವಿಮೆ ಮತ್ತು ಇತರೆ ಕ್ಷೇಮಾಭಿವೃದ್ಧಿ ಯೋಜನೆಗಳು ಲಭ್ಯವಾಗುವಂತೆ ಮಾಡುವುದಕ್ಕಾಗಿ ಕೈಗೊಂಡ ಉತ್ತೇಜನಾತ್ಮಕ ಕ್ರಮಗಳು;

(ಸಿ) ಅರ್ಥವ್ಯವಸ್ಥೆಯಲ್ಲಿ ಬೀದಿ ವ್ಯಾಪಾರಿಗಳ ಪಾತ್ರದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ವರ್ಷದ ಅವಧಿಯಲ್ಲಿ ಕೈಗೊಂಡ ಕ್ರಮಗಳು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿದ್ದಿಕ್ ಪಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

**ಇವರಿಗೆ.**

1. ಮಹಾಲೇಖಪಾಲರು (ಎ&ಇ), ಜಿ&ಎಸ್.ಎಸ್.ಎ) ಇ&ಆರ್.ಎಸ್.ಎ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು (ಪ್ರಕರಣ ಸಂಖ್ಯೆ 321/2019).
3. ಜಂಟಿ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಮಂತ್ರಾಲಯ, 3ನೇ ಮಹಡಿ, ಶ್ರಮ ಶಕ್ತಿ ಭವನ, ರಫಿ ಮಾರ್ಗ, ನವದೆಹಲಿ.
4. ಜಂಟಿ ಕಾರ್ಯದರ್ಶಿ, ದೀನ್‌ದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್, ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ ನೆಲಮಹಡಿ, ನಿರ್ಮಾಣ್ ಭವನ, ನವದೆಹಲಿ.
5. ಸರ್ಕಾರದ ಅಪರ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು.
6. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–9) ವಿಧಾನ ಸೌಧ, ಬೆಂಗಳೂರು
7. ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಎಲ್ಲಾ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಅಪರಮುಖ್ಯ ಕಾರ್ಯದರ್ಶಿಗಳು.
9. ನಿರ್ದೇಶಕರು, ಸಹಕಾರ ಚುನಾವಣೆ ಪ್ರಾಧಿಕಾರ, ಶಾಂತಿನಗರ, ಬೆಂಗಳೂರು.
10. ಆಯುಕ್ತರು, ಬಿ.ಬಿ.ಎಂ.ಪಿ., ಬೆಂಗಳೂರು.
11. ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ, ಬೆಂಗಳೂರು.
12. ಆಯುಕ್ತರು, ಉದ್ಯಮಶೀಲತೆ ಮತ್ತು ಜೀವನೋಪಾಯ, ಬೆಂಗಳೂರು.
13. ಮಿಷನ್ ನಿರ್ದೇಶಕರು, ದೀನ್‌ದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್, ಬೆಂಗಳೂರು.
14. ಮಿಷನ್ ನಿರ್ದೇಶಕರು, ಸಂಜೀವಿನಿ– ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.
15. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು
16. ಖಜಾನೆ ಅಧಿಕಾರಿ, ರಾಜ್ಯಹುಜೂರ್ ಖಜಾನೆ, ಬೆಂಗಳೂರು.

17. ಸಚಿವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು.
18. ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಎಸ್‌ಡಿಇಎಲ್, ಬೆಂಗಳೂರು.
19. ಸರ್ಕಾರಿ ವಕೀಲರು, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು.
20. ಸರ್ಕಾರದ ಉಪಕಾರ್ಯದರ್ಶಿ, ಎಸ್‌ಡಿಇಎಲ್, ಬೆಂಗಳೂರು.
21. ಕರ್ನಾಟಕ ಎಲ್ಲಾ ಬೀದಿ ಬದಿ ವ್ಯಾಪಾರಿಗಳ ಸಂಘಗಳಿಗೆ (ಮಿಷನ್ ನಿರ್ದೇಶಕರು, ದೀನ್‌ದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ ಇವರ ಮೂಲಕ.)
22. ಶಾಖಾ ರಕ್ಷಾಕಡತ/ಹೆಚ್ಚುವರಿ ಪ್ರತಿ.